ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

29 ಸೆಪ್ಟೆಂಬರ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -198 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಅಂಕಿತಾ ರೈನಾ ಮತ್ತು ರುತುಜಾ ಭೋಸಲೆ ಜೋಡಿಯು ಸೋಮವಾರ ಮೊದಲ ಸುತ್ತಿನಲ್ಲೇ ಸೋಲುವುದರೊಂದಿಗೆ ಏಷ್ಯನ್ ಗೇಮ್ಸ್‌ನ ಟೆನಿಸ್‌ನಲ್ಲಿ ಭಾರತದ ಮಹಿಳಾ ಡಬಲ್ಸ್ ಅಭಿಯಾನವು ಅಂತ್ಯಗೊಂಡಿತು.



ಮಳೆ ಹೋಯಿತು ಬಿಸಿಲು ಬಂತು : ಇದೇ ಶರದೃತು » 2


ಬಡವರಿಗೆ ನಿವೇಶನ ನೀಡುವಂತೆ ಆಗ್ರಹಿಸಿ ಪ್ರತಿಭಟನೆ » 3


ಹಾಸನ-ಬೇಲೂರು ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ » 4

# ನೀರಾವರಿ ಯೋಜನೆಗಳಿಗೆ ಮಧ್ಯಸ್ಥಿಕೆ ವಹಿಸಿ

## ಕೇಂದ್ರಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ | ಜಲಶಕ್ತಿ ಸಚಿವರ ಜೊತೆ ಸಮಾಲೋಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಕುಡಿಯುವ ನೀರು, ನೀರಾವರಿ ಮತ್ತು ಬರ ಪರಿಹಾರ ಅಗತ್ಯತೆಗಳನ್ನು ಈಡೇರಿಸಲು ಹಾಗು ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ, ಯೋಜನೆಗಳಿಗೆ ಬಾಕಿ ಇರುವ ಅನುಮತಿ ನೀಡಬೇಕೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರನ್ನು ಸೋಮವಾರ ಭೇಟಿ ಮಾಡಿ,ರಾಜ್ಯದ ಯೋಜನೆಗಳ ಮನವಿಯನ್ನು ಸಲ್ಲಿಸಿದರು. ಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆಗೆ ಕರ್ನಾಟಕ ಸರ್ಕಾರ 16,745 ಕೋ.ರೂ. ಮೊತ್ತದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಸಿದೆ. ಈ ಡಿಪಿಆರ್ ಶೀಘ್ರ ಮೌಲ್ಯಮಾಪನ ಮಾಡಿ, ಮಂಜೂರಾತಿಗಾಗಿ ಕೇಂದ್ರ ಜಲ ಆಯೋಗಕ್ಕೆ ನಿರ್ದೇಶನ ನೀಡಬೇಕೆಂದು ಕೋರಿದ್ದಾರೆ.

### ಮಧ್ಯಂತರ ಅರ್ಜಿ ಸಲ್ಲಿಸಿ



ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಗೆ ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ ತೀರ್ಪಿನ ಮೇಲೆ ಅಧಿಸೂಚನೆ ಬಾಕಿ ಇದೆ. ಇದರಿಂದಾಗಿ ರಾಜ್ಯದ ನೀರಾವರಿ ಯೋಜನೆಗಳ ಮೇಲೆ ಪರಿಣಾಮ ಬೀರಿದೆ. ಈ ಅಧಿಸೂಚನೆ ಸಂಬಂಧಿಸಿದ ವಿಷಯವು ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ. ಹೀಗಾಗಿ ಜಲಶಕ್ತಿ ಸಚಿವಾಲಯವು ನ್ಯಾಯಾಲಯದ ಮುಂದೆ ತುರ್ತು ಅಧಿಸೂಚನೆ ಹೊರಡಿಸುವ ಬಗ್ಗೆ ಮಧ್ಯಂತರ ಅರ್ಜಿ ಸಲ್ಲಿಸಬೇಕು. ಅಧಿಸೂಚನೆ ಹೊರಡಿಸುವುದರಿಂದ ಕರ್ನಾಟಕ ರಾಜ್ಯವು ತನಗೆ ಹಂಚಿಕೆಯಾದ ನೀರಿನ ಪಾಲನ್ನು ಬಳಸಿಕೊಳ್ಳಲು ಮತ್ತು ಸಂಬಂಧಿತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಮನವಿ ಮಾಡಿದ್ದಾರೆ.

» ನಾಲ್ಕನೇ ಪುಟದಲ್ಲಿ

### ನದಿ ಜೋಡಣೆ: ಸಮಪಾಲು ಬೇಕು

ಗೋದಾವರಿ-ಕಾವೇರಿ ಜೋಡಣೆ ಮತ್ತು ಬೇಡ್ತಿ-ವರದಾ ಜೋಡಣೆ ಯೋಜನೆಗೆ ಒಪ್ಪಂದದ ಜ್ಞಾಪಕ ಪತ್ರಕ್ಕೆ ಸಹಿ ಹಾಕಲು ಎನ್‌ಡಬ್ಲ್ಯೂಡಿಎಗೆ ತಾತ್ವಿಕ ಒಪ್ಪಿಗೆ ನೀಡಿದೆ. ಫಲಾನುಭವಿ ರಾಜ್ಯಗಳಿಗೆ ಪ್ರಸ್ತಾಪಿಸಿದ ಹಂಚಿಕೆ ಜೊತೆಗೆ ಹೋಲಿಸಿ ರಾಜ್ಯದ ಪಾಲನ್ನು ಮರುಪರಿಶೀಲಿಸಬೇಕು. ಕರ್ನಾಟಕಕ್ಕೂ ಸಮಾನ ನೀರಿನ ಹಂಚಿಕೆ ಮಾಡುವಂತೆ ನಿರ್ದೇಶನ ನೀಡುವಂತೆ ಕೋರಿದ್ದಾರೆ.

### ಇಎಸ್‌ಝಡ್ ಅಧಿಸೂಚನೆ ಮರುಪರಿಶೀಲಿಸಿ

ಪಶ್ಚಿಮಘಟ್ಟ ಪರಿಸರ ಸೂಕ್ಷ್ಮ ಪ್ರದೇಶ (ಇಎಸ್‌ಝಡ್) ವ್ಯಾಪ್ತಿಗೆ ಕೃಷಿ ಭೂಮಿ, ತೋಟಗಳು ಮತ್ತು ವಸತಿ ಪ್ರದೇಶವನ್ನು ಸೇರಿಸಿರುವುದು ಕಳವಳಕಾರಿ. ರಾಜ್ಯ ಸರ್ಕಾರ ಪ್ರಸ್ತಾಪಿಸಿರುವ ವೈಜ್ಞಾನಿಕ ಸರ್ವೆ, ಭೌತಿಕ ಪರಿಶೀಲನೆ ನಡೆಸಬೇಕು. ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ, ರಾಜ್ಯದೊಂದಿಗೆ ಚರ್ಚಿಸಿದ ನಂತರವೇ ಅಂತಿಮ ಅಧಿಸೂಚನೆ ಹೊರಡಿಸಬೇಕೆಂದು ಕೇಂದ್ರ ಅರಣ್ಯ ಸಚಿವ ಭೂಪೇಂದರ್ ಯಾದವ್ ಅವರಿಗೆ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

# ಹೆಚ್.ಬಿ.ರಮೇಶ್ ನಿಧನಕ್ಕೆ ಕ.ಸಾ.ಪ. ಶ್ರದ್ಧಾಂಜಲಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ, ರಂಗಕರ್ಮಿ ಹಾಗು ಯೋಗ ಗುರು ಹೆಚ್.ಬಿ.ರಮೇಶ್ ಅವರ ಪಾರ್ಥಿವ ಶರೀರಕ್ಕೆ ಸೋಮವಾರ ನಗರದ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಅಂತಿಮ ನಮನ ಸಲ್ಲಿಸಲಾಯಿತು.

ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಲೇಖಕರು ಹಾಗು ರಮೇಶ್ ಅವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ನಗರದ ಮಹಾರಾಜ ಪಾರ್ಕ್‌ನಲ್ಲಿರುವ ವಿವೇಕಾನಂದ ಯೋಗ ಶಾಲೆಯಲ್ಲಿ ಅಂತಿಮ ದರ್ಶನದ ಬಳಿಕ ಪರಿಷತ್ ಆವರಣಕ್ಕೆ ಪಾರ್ಥಿವ ಶರೀರವನ್ನು ತರಲಾಯಿತು. ಒಂದು ನಿಮಿಷ ಮೌನಾಚರಣೆ ಬಳಿಕ ರಮೇಶ್ ಅವರ ಒಡನಾಡಿಗಳು ತಮ್ಮ ಅನಿಸಿಕೆ ಹಂಚಿಕೊಂಡರು. ಮಧ್ಯಾಹ್ನ ಬಿಟ್ಟಗೌಡನಹಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಹಿರಿಯ ಸಾಹಿತಿ ಮೇಟಿಕೆರೆ ಹಿರಿಯಣ್ಣ ಅವರು ಮಾತನಾಡಿ, ಹೆಚ್.ಬಿ.ರಮೇಶ್ ಅವರು ರಂಗಭೂಮಿ ಕಲಾವಿದರಾಗಿ ನನಗೆ ಪರಿಚಿತರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ ಶ್ಲಾಘನೀಯ. ಹೊಯ್ಸಳ ಲಾಂಛನ ಮತ್ತು ಹೆಬ್ಬಾಗಿಲು ನಿರ್ಮಾಣದ ಮೂಲಕ ಹಾಸನದಲ್ಲಿ ಸಾಹಿತ್ಯ ಪರಿಷತ್‌ಗೆ ಹೊಸ ಮೆರುಗು ನೀಡಿದ್ದಾರೆಂದರು.

ಪತ್ರಕರ್ತ ಆರ್.ಪಿ.ವೆಂಕಟೇಶ್‌ಮೂರ್ತಿ ಅವರು ಮಾತನಾಡಿ, ರಮೇಶ್ ಅವರು ಯೋಗ ಶಿಕ್ಷಕರಾಗಿ ಎಷ್ಟು

» ನಾಲ್ಕನೇ ಪುಟದಲ್ಲಿ



### ಶಂಭುನಾಥ ಶ್ರೀ ಸಂತಾಪ

ಯೋಗ ಗುರು ಹಾಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹೆಚ್.ಬಿ. ರಮೇಶ್ ಅವರ ನಿವಾಸಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ತೆರಳಿ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.
ರಮೇಶ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ ಶ್ರೀಗಳು, ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗು ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿದರು.
ಹಿರಿಯ ಜಾನಪದ ತಜ್ಞ ಡಾ.ಹಂಪನಹಳ್ಳಿ ತಿಮ್ಮೇಗೌಡ, ರಮೇಶ್ ಅವರ ಪುತ್ರ ನಾಗೇಶ್ (ಸಾಹಿತಿ), ಬ್ರಾಹ್ಮಣ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ವೇಣುಗೋಪಾಲ್, ಜೈನ ಸಮಾಜದ ಮುಖಂಡ ಸುಕೇಶ್ ಮತ್ತಿತರರಿದ್ದರು.

# ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

## ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಜಾಕ್ಕೆ ಆಗ್ರಹ




• ಪ್ರಜೋದಯ ವರದಿ

**ಹಾಸನ:** ಕೇಂದ್ರ ಚುನಾವಣಾ ಆಯೋಗದ ಸರ್ವಾಧಿಕಾರಿ ಧೋರಣೆ ಹಾಗು ಬಿಜೆಪಿ ಪರವಾದ ಪಕ್ಷಪಾತದ ನಿಲುವನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಂಸದ ಶ್ರೇಯಸ್ ಪಟೇಲ್ ನೇತೃತ್ವದಲ್ಲಿ ಪಕ್ಷದ ಕಾರ್ಯ ಕರ್ತರು-ಮುಖಂಡರು, ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಕೇಂದ್ರ ಸರ್ಕಾರ ಹಾಗು ಮುಖ್ಯ ಚುನಾವಣಾ ಆಯೋಗದ ವಿರುದ್ಧ ಘೋಷಣೆಗಳನ್ನು ಒಳಗೊಂಡ ಫಲಕಗಳನ್ನು ಹಿಡಿದು ಮೆರವಣಿಗೆ ಆರಂಭಿಸಿದ ಪ್ರತಿಭಟನಾಕಾರರು, ಬಿ.ಎಂ. ರಸ್ತೆಯ ಮೂಲಕ ಸಾಗಿ ಎನ್.ಆರ್. ವೃತ್ತದಲ್ಲಿ ಮುಖ್ಯ ಚುನಾವಣಾ ಆಯುಕ್ತರ ಪ್ರತಿಕೃತಿಗಳನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರು, ಕೇಂದ್ರ ಸರ್ಕಾರವು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ಬುಡಮೇಲು ಮಾಡುವ ರೀತಿಯಲ್ಲಿ ನಡೆದುಕೊಳ್ಳುತ್ತಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ವರ್ತಿಸುತ್ತಿದ್ದು, ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸುವ ಬದಲು ಅವರನ್ನು ಪಟ್ಟಿಯಿಂದ ಹೊರಗಿಡುವ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವುದು ಖಂಡನೀಯವೆಂದರು.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಡೆಗಣಿಸಿ ಪಕ್ಷಪಾತದ ಧೋರಣೆ ಅನುಸರಿಸಲಾಗುತ್ತಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಕೂಡಲೇ ಹುದ್ದೆಯಿಂದ ವಜಾಗೊಳಿಸಬೇಕು. ಸಂವಿಧಾನ ವಿರೋಧಿ ನಡವಳಿಕೆಯ ಆರೋಪದಡಿ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಬಿ. ಶಶಿಧರ್, ಮುಖಂಡರಾದ ಬನವಾಸೆ ರಂಗಸ್ವಾಮಿ, ರಂಜಿತ್ ಗೊರೂರು, ರಘು, ಚಂದ್ರ ಶೇಖರ್, ಹೆಚ್.ಟಿ.ಲಕ್ಷ್ಮಣ್ ಇತರರಿದ್ದರು.

# ತಿಂಗಳೊಳಗೆ ರೈಲ್ವೆ ಮೇಲ್ಸೇತುವೆ ಸಂಚಾರಕ್ಕೆ ಮುಕ್ತ

## ಸರ್ವಿಸ್ ರಸ್ತೆ ಹೊರತುಪಡಿಸಿ ಉಳಿದೆಲ್ಲಾ ಕೆಲಸ ಪೂರ್ಣ | ಸಂಸದ ಶ್ರೇಯಸ್ ಪಟೇಲ್ ಭೇಟಿ

• ಪ್ರಜೋದಯ ವರದಿ

**ಹಾಸನ:** ನಗರದ ರೈಲ್ವೆ ಮೇಲ್ಸೇತುವೆ ಕಾಮಗಾರಿ ಇಷ್ಟೊತ್ತಿಗೆ ಪೂರ್ಣಗೊಳ್ಳಬೇಕಿತ್ತಾದರೂ ಅಮೇರಿಕಾ-ಇರಾನ್ ಯುದ್ಧದಿಂದ ಕಟ್ಟಡ ಸಾಮಾಗ್ರಿ ಲಭ್ಯವಾಗದೆ ವಿಳಂಬವಾಗಿದೆ. ಹಾಸನಾಂಬ ಜಾತ್ರೆ ಪ್ರಾರಂಭದ ವೇಳೆಗೆ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಸೋಮವಾರ ರೈಲ್ವೆ ಮೇಲ್ಸೇತುವೆ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2019 ರಿಂದ ನಡೆಯುತ್ತಿರುವ ಕಾಮಗಾರಿಯನ್ನು ಇನ್ನೊಂದು ತಿಂಗಳೊಳಗೆ ಪೂರ್ಣಗೊಳಿಸಲಾಗುವುದು. ಸರ್ವಿಸ್ ರಸ್ತೆ ಕಾಮಗಾರಿ ಹೊರತುಪಡಿಸಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಿ ಮುಖ್ಯ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಸೂಚಿಸಲಾಗಿದೆ ಎಂದರು.

ಸರ್ವಿಸ್ ರಸ್ತೆಯನ್ನೂ ಈಗಲೇ ಮುಗಿಸಬೇಕೆಂದು ಆದೇಶಿಸಿದರೆ



ಕೆಲಸ ಮುಗಿಯುವುದು ಮತ್ತಷ್ಟು ತಡವಾಗುತ್ತದೆ. ನಮ್ಮ ನಿರೀಕ್ಷೆ ಪ್ರಕಾರ ಇಷ್ಟೊತ್ತಿಗೆ ಕೆಲಸ ಮುಗಿಯಬೇಕಿತ್ತು. ಅದಕ್ಕೆ ಕಾರಣ ಕೇಳಿದರೆ ಯುದ್ಧದ ನೆಪ ಹೇಳುತ್ತಾರೆ. ಸರ್ವಿಸ್ ರಸ್ತೆ ಕಾಮಗಾರಿ ಸ್ಥಳದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಬಾಕಿ ಇಲ್ಲ. ಅಂಡರ್ ಪಾಸ್ ಜಾಗದ ಭೂ ವಿವಾದ ನ್ಯಾಯಾಲಯದಲ್ಲಿದೆ. ಆದಷ್ಟು ಬೇಗ ಸಮಸ್ಯೆ ಇತ್ಯರ್ಥಪಡಿಸಲಾಗುವುದೆಂದರು.

### ರಾಜ್ಯ ಸರ್ಕಾರದ ಬೊಕ್ಕಸ ಖಾಲಿಯಾಗಿಲ್ಲ

ಇದೇ ವೇಳೆ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಕುರಿತು ಪ್ರತಿಪಕ್ಷಗಳ ಟೀಕೆಗೆ ಪ್ರತಿಕ್ರಿಯಿಸಿ, ರಾಜ್ಯ ಸರ್ಕಾರದ ಬೊಕ್ಕಸ ಖಾಲಿಯಾಗಿಲ್ಲ. ಸರ್ಕಾರ ಸುಭದ್ರವಾಗಿದೆ. ಆರ್ಥಿಕ ಸಮಸ್ಯೆಗಳು ಇದ್ದಿದ್ದರೆ ಇಷ್ಟೊಂದು ಯೋಜನೆಗಳನ್ನು ಮುಂದುವರಿಸಲು ಸಾಧ್ಯವಾಗುತ್ತಿತ್ತೇ ಎಂದ ಅವರು, ರಾಜ್ಯ ಸರ್ಕಾರಕ್ಕೆ ಆರ್ಥಿಕ ಮುಗ್ಗಟ್ಟು ಎದುರಾಗಿದೆ ಎಂಬ ಆರೋಪಗಳು ಶುದ್ಧ ಸುಳ್ಳು. ಜನರ ವಿಶ್ವಾಸದೊಂದಿಗೆ ಸರ್ಕಾರ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಸಮರ್ಥಿಸಿಕೊಂಡರು.

### ಸಾಲ ಮನ್ನಾಕ್ಕೆ ಕೇಂದ್ರ ಕೈಜೋಡಿಸಲಿ

ಹೆಚ್.ಡಿ.ಕುಮಾರಸ್ವಾಮಿ ಅವರು ಸಾಲ ಮನ್ನಾ ಮಾಡಿದ್ದು ಕಾಂಗ್ರೆಸ್ ಬೆಂಬಲದಿಂದ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನಾನು ರಾಜಕೀಯವಾಗಿ ಅವರ ಹೇಳಿಕೆಗೆ ಪ್ರತಿಕ್ರಿಯಿಸುವುದಿಲ್ಲ. ಅದು ಪಕ್ಷದ ಸಹಭಾಗಿತ್ವ ಹಾಗು ವಿಶ್ವಾಸದೊಂದಿಗೆ ಕೈಗೊಂಡ ಕಾರ್ಯಕ್ರಮವಾಗಿತ್ತು. ಈಗ ಮತ್ತೆ ಸಾಲ ಮನ್ನಾ ಮಾಡಬೇಕಾದರೆ ಕೇಂದ್ರ ಸರ್ಕಾರವೂ ಕೈಜೋಡಿಸಬೇಕು. ಕಸ್ತೂರಿ ರಂಗನ್ ವರದಿ ವಿಚಾರದಲ್ಲಿಯೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಲೆನಾಡಿನ ಜನರ ಪರ ಧ್ವನಿ ಎತ್ತಿದ್ದಾರೆ. ಮಲೆನಾಡಿನ ಜನರ ಹಿತ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ರಂಜಿತ್ ಗೊರೂರು, ಮುಖಂಡರಾದ ದೇವರಾಜೇಗೌಡ ಇತರರಿದ್ದರು.

### ಗುತ್ತಿಗೆದಾರರಿಗೆ ಸಂಸದರ ಫೋನ್ ಕರೆ

ರೈಲ್ವೆ ಮೇಲ್ಸೇತುವೆ ಕಾಮಗಾರಿ ಪರಿಶೀಲನೆ ವೇಳೆ ದೂರವಾಣಿ ಮೂಲಕ ಗುತ್ತಿಗೆದಾರರನ್ನು ಸಂಪರ್ಕಿಸಿದ ಸಂಸದ ಶ್ರೇಯಸ್ ಪಟೇಲ್ ಒಂದು ತಿಂಗಳೊಳಗೆ ಕೆಲಸ ಪೂರ್ಣಗೊಳಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಸುಮಾರು 10 ನಿಮಿಷಕ್ಕೂ ಅಧಿಕ ಕಾಲ ಸಂಭಾಷಣೆ ನಡೆಸಿದ ಅವರು, ಯಾವ ಸಬೂಬು ಹೇಳುವಂತಿಲ್ಲ, ಕೆಲಸ ಮುಗಿಯಬೇಕೆಂದರು.
ಹಾಸನಾಂಬ ಜಾತ್ರಾ ಮಹೋತ್ಸವ ಆರಂಭವಾಗಲಿರುವ ಹಿನ್ನಲೆಯಲ್ಲಿ ನಗರದಲ್ಲಿ ವಾಹನಗಳ ಸಂಚಾರ ಹೆಚ್ಚಾಗಲಿದೆ. ಆದ್ದರಿಂದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

# ಹಾಸನ-ಬೇಲೂರು ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ

## ಎನ್‌ಹೆಚ್-373 ಕಾಮಗಾರಿ ಪ್ರಗತಿ ಪರಿಶೀಲನಾ ಸಭೆ: ಶ್ರೇಯಸ್ ಪಟೇಲ್ ಸೂಚನೆ

• ಪ್ರಜೋದಯ ವರದಿ

**ಹಾಸನ:** ಹಾಸನ-ಬೇಲೂರು ರಾಷ್ಟ್ರೀಯ ಹೆದ್ದಾರಿ ಎನ್‌ಹೆಚ್-373ರ ಕಾಮಗಾರಿಯನ್ನು ಗುಣಮಟ್ಟದೊಂದಿಗೆ ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಪ್ರಗತಿ ಕುರಿತು ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ,



ಕಾಮಗಾರಿಯ ಪ್ರಸ್ತುತ ಸ್ಥಿತಿ, ಪೂರ್ಣಗೊಳ್ಳಬೇಕಿರುವ ಕಾಮಗಾರಿಗಳು, ಸಾರ್ವಜನಿಕರಿಗೆ ಎದುರಾಗುತ್ತಿರುವ ಸಮಸ್ಯೆಗಳು ಹಾಗೂ ಕಾಮಗಾರಿ ಪೂರ್ಣಗೊಳಿಸಲು ಇರುವ

» ನಾಲ್ಕನೇ ಪುಟದಲ್ಲಿ

### ಎನ್‌ಹೆಚ್‌ಎ ಅಧಿಕಾರಿಗಳೊಂದಿಗೆ ಸಭೆ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಹಾಗು ಸಂಬಂಧಿಸಿದ ಅಧಿಕಾರಿಗಳೊಂದಿಗೆ ರಸ್ತೆ ಕಾಮಗಾರಿಗಳ ಕುರಿತು ನಡೆದ ಪರಿಶೀಲನಾ ಸಭೆಯಲ್ಲಿ ಹಾಸನ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ವಿವಿಧ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪ್ರಗತಿ, ಕಾಮಗಾರಿಗಳ ಗುಣಮಟ್ಟ ಹಾಗು ಸಾರ್ವಜನಿಕರಿಗೆ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.
ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಯಾವುದೇ ರೀತಿಯ ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು. ಬಾಕಿ ಉಳಿದಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಜತೆಗೆ, ನಿರ್ಮಾಣ ಕಾಮಗಾರಿಗಳ ಗುಣಮಟ್ಟವನ್ನು ನಿರಂತರವಾಗಿ ಪರಿಶೀಲಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

# ಶ್ರವಣಬೆಳಗೊಳಕ್ಕಿಂದು ಸಚಿವ ಸವದಿ

**ಹಾಸನ:** ಸಹಕಾರ ಸಚಿವ ಲಕ್ಷ್ಮಣ ಎಸ್. ಸವದಿ ಅವರು ಸೆ.29ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಶ್ರವಣಬೆಳಗೊಳಕ್ಕೆ ಭೇಟಿ ನೀಡಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಶ್ರವಣಬೆಳಗೊಳ ಬಾಹುಬಲಿ ಆಸ್ಪತ್ರೆ ಆವರಣದಲ್ಲಿ ಬಾಹುಬಲಿ ನರ್ಸಿಂಗ್ ಕಾಲೇಜು ಹೊಸ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

### ಅ.5 ರಂದು 2ನೇ ತ್ರೈಮಾಸಿಕ ಕೆಡಿಪಿ ಸಭೆ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ 2026-27ನೇ ಸಾಲಿನ 2ನೇ ತ್ರೈ ಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆ ಅ.5ರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ತಿಳಿಸಿದ್ದಾರೆ.

# ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ತೀವ್ರ ಬರಗಾಲದಿಂದ ಸಂಕಷ್ಟಕ್ಕೀಡಾಗಿರುವ ರೈತರ ಸಂಪೂರ್ಣ ಕೃಷಿ ಸಾಲ ಮನ್ನಾ ಮಾಡಬೇಕು ಹಾಗು ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕೆಂದು ಆಗ್ರಹಿಸಿ ರಾಜ್ಯ ರೈತ ಸಂಘ ಜಿಲ್ಲಾ ಘಟಕದಿಂದ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ರೈತ ಸಂಘದ ಜಿಲ್ಲಾಧ್ಯಕ್ಷ ಹೆಚ್.ಕೆ.ರಘು ಅವರು ಮಾತನಾಡಿ, ಬರದಿಂದ ಕೆರೆ-ಕಟ್ಟೆಗಳು ಹಾಗು ಜಲಮೂಲಗಳು ಬತ್ತಿದ್ದು ಬೆಳೆಗಳು ಹಾನಿಗೀಡಾಗಿವೆ. ಅಂತರ್ಜಲ ಕುಸಿತದಿಂದ ಅಡಿಕೆ, ತೆಂಗು ಸೇರಿ ತೋಟಗಾರಿಕಾ ಬೆಳೆಗಳಿಗೂ ಹಾನಿಯಾಗಿದೆ. ನೀರು ಮತ್ತು ಮೇವಿನ ಕೊರತೆಯಿಂದ ಜಾನುವಾರು ಸಾಕಾಣಿಕೆ ಕಷ್ಟವಾಗಿದ್ದು, ರೈತರು



ಸಂಕಷ್ಟಕ್ಕೆ ಸಿಲುಕಿದ್ದಾರೆಂದರು.

ಕೃಷಿ ಪಂಪ್‌ಸೆಟ್‌ಗಳಿಗೆ ಕನಿಷ್ಠ ಏಳು ಗಂಟೆ ವಿದ್ಯುತ್ ಪೂರೈಸಬೇಕು. ಬೆಳೆ ವಿಮೆ ಹಾಗು ರಾಗಿ ಖರೀದಿ ಬಾಕಿ ಹಣವನ್ನು ತಕ್ಷಣ ಪಾವತಿಸಬೇಕು. ಬೆಳೆನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡಬೇಕು. ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಮಾಡಿ, ಸಾಲ ವಸೂಲಾತಿಗೆ ತಡೆ ನೀಡಬೇಕೆಂದರು.

» ನಾಲ್ಕನೇ ಪುಟದಲ್ಲಿ

# ಅಣ್ಣನಿಂದ ಇರಿತಕ್ಕೊಳಗಾಗಿದ್ದ ತಮ್ಮ ಸಾವು

• ಪ್ರಜೋದಯ ವರದಿ

ಬೇಲೂರು: ಜಮೀನು ವಿವಾದ ಹಾಗು ಪಡಿತರಕ್ಕಾಗಿ ನಡೆದ ಜಗಳದಲ್ಲಿ ಅಣ್ಣನಿಂದಲೇ ಚಾಕುವಿನಿಂದ ಇರಿತಕ್ಕೊಳಗಾಗಿದ್ದ ತಮ್ಮ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಸೋಂಪುರ ಗ್ರಾಮದ ರಘು (44) ಮೃತರು. ಸಹೋದರ ದೇವರಾಜ್ ಜೊತೆಗೆ ಸೆ. 24ರಂದು ಗಲಾಟೆ ನಡೆದಿತ್ತು. ಆಸ್ತಿ ವಿಚಾರವಾಗಿ ಕಲಹವಾಗಿ ಇಬ್ಬರೂ ಪ್ರತ್ಯೇಕವಾಗಿದ್ದರು. ಆದರೆ ಒಂದೇ ಬಿಪಿಎಲ್ ಕಾರ್ಡ್ ಇದ್ದರಿಂದ ಪಡಿತರ ಪಡೆಯುವುದಕ್ಕಾಗಿ ಪರಸ್ಪರ ಗಲಾಟೆ ಮಾಡಿಕೊಂಡಿದ್ದರು. ಒಂದು ತಿಂಗಳು ದೇವರಾಜ್ ಇನ್ನೊಂದು ತಿಂಗಳು ರಘು ಪಡಿತರ ಪಡೆಯುತ್ತಿದ್ದರು. ಕಳೆದ ಗುರುವಾರ ಈ ತಿಂಗಳ ಪಡಿತರ ಪಡೆಯಲು ರಘು ಅಣ್ಣ ದೇವರಾಜ್ ಮನೆಗೆ ಹೋಗಿ ಬಿಪಿಎಲ್ ಕಾರ್ಡ್ ಪಡೆದು ನ್ಯಾಯಬೆಲೆ ಅಂಗಡಿಗೆ ತೆರಳಿದ ವೇಳೆ ಪಡಿತರವನ್ನು ದೇವರಾಜ್ ತೆಗೆದುಕೊಂಡಿದ್ದಾರೆಂದು ನ್ಯಾಯಬೆಲೆ ಅಂಗಡಿಯವರು ಹೇಳಿದ್ದರು. ಅದರಿಂದ ಕೆರಳಿದ ರಘು, ಅಣ್ಣನ ಮನೆಗೆ ಹೋಗಿ ಜಗಳವಾಡಿದ್ದ. ಈ ವೇಳೆ ದೇವರಾಜ್ ಚಾಕುವಿನಿಂದ ನಾಲ್ಕೈದು ಬಾರಿ ಇರಿದು ಪರಾರಿಯಾಗಿದ್ದ. ಗಂಭೀರ ಗಾಯಗೊಂಡಿದ್ದ ರಘು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟಿದ್ದಾರೆ.

# ತಾಲ್ಲೂಕು ಕಚೇರಿಯಲ್ಲಿ ಕಡತ ವಿಲೇವಾರಿ ವಿಳಂಬ

• ಪ್ರಜೋದಯ ವರದಿ

■ ಅಗತ್ಯ ದಾಖಲೆ ಸಲ್ಲಿಸಿದರೂ ಅಲೆದಾಟ

■ ಬಡವರ ಸಮಸ್ಯೆಗೆ ಸ್ಪಂದಿಸದ ಅಧಿಕಾರಿಗಳು, ನೌಕರರು

**ಸಕಲೇಶಪುರ:** ತಾಲ್ಲೂಕು ಕಚೇರಿಯಲ್ಲಿ ರೈತರು, ದಿನಗೂಲಿ ಕಾರ್ಮಿಕರ ಅರ್ಜಿ ಮತ್ತು ಕಡತಗಳ ವಿಲೇವಾರಿ ವಿಳಂಬವಾಗುತ್ತಿದೆ. ಅಗತ್ಯ ದಾಖಲೆಗಳನ್ನು ಸಲ್ಲಿಸಿದ ಬಳಿಕವೂ ಹಲವು ಬಾರಿ ಕಚೇರಿಗಳಿಗೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಸರ್ಕಾರಿ ಸೇವೆಗಳನ್ನು ಸರಳಗೊಳಿಸುವ ಉದ್ದೇಶದಿಂದ ಹಲವು ವ್ಯವಸ್ಥೆಗಳನ್ನು ಆನ್‌ಲೈನ್‌ಗೆ ತರಲಾಗಿದ್ದರೂ, ವಾಸ್ತವದಲ್ಲಿ ಕೆಲ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಕಚೇರಿಗಳಲ್ಲಿ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ. ಅದರಲ್ಲೂ ಕಡತಕ್ಕೆ ಸಂಬಂಧಿಸಿದ ಅಧಿಕಾರಿಗಳು ಹಾಗು ನೌಕರರನ್ನು ಭೇಟಿ ಮಾಡಿ ಮಾಹಿತಿ ಪಡೆಯಲು ದೀರ್ಘಕಾಲ ಕಾಯಬೇಕಾಗುತ್ತಿದೆ.

ಸಣ್ಣ ರೈತರು ಹಾಗು ದಿನಗೂಲಿ ಕಾರ್ಮಿಕರಿಗೆ ಒಂದು ದಿನದ ಕೆಲಸ ತಪ್ಪಿದರೂ ಕುಟುಂಬದ ಆದಾಯದ ಮೇಲೆ ಪರಿಣಾಮ ಬೀರುತ್ತದೆ. ಹೀಗಿರುವಾಗ ಅರ್ಜಿಯ ಸ್ಥಿತಿ ತಿಳಿದುಕೊಳ್ಳಲು ಅಥವಾ ಕಡತದ ವಿಲೇವಾರಿಗಾಗಿ ಪದೇಪದೇ ಕಚೇರಿಗೆ ಭೇಟಿ ನೀಡಬೇಕಾದ ಪರಿಸ್ಥಿತಿ ಎದುರಾಗಿದೆ.

ಒಮ್ಮೆ ಸಲ್ಲಿಸಿದ ಅರ್ಜಿಯ ಸ್ಥಿತಿ ಏನು, ಯಾವ ಹಂತದಲ್ಲಿದೆ, ಇನ್ನೇನಾದರೂ ದಾಖಲೆ ಅಗತ್ಯವಿದೆಯೇ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಸಿಗದಿರುವುದರಿಂದ ಸಾರ್ವಜನಿಕರು ಮತ್ತೆ ಮತ್ತೆ ಕಚೇರಿಗೆ ಬರುವಂತಾಗಿದೆ



ಎಂಬ ದೂರುಗಳಿವೆ. ಅರ್ಜಿಗಳ ವಿಲೇವಾರಿಗೆ ನಿಗದಿತ ಕಾಲಮಿತಿ ಇದ್ದರೂ, ಅದರ ಪಾಲನೆಯಾಗುತ್ತಿದೆಯೇ ಎಂಬುದನ್ನು ಮೇಲಾಧಿಕಾರಿಗಳು ಪರಿಶೀಲಿಸಬೇಕೆಂಬ ಒತ್ತಾಯವೂ ಕೇಳಿ ಬಂದಿದೆ.

### ರೆಕಾರ್ಡ್ ರೂಂಗೆ ಖಾಸಗಿ ವ್ಯಕ್ತಿಗಳ ಪ್ರವೇಶ

ತಾಲ್ಲೂಕು ಕಚೇರಿಯ ರೆಕಾರ್ಡ್ ರೂಂಗೆ ಖಾಸಗಿ ವ್ಯಕ್ತಿಗಳು, ಮಧ್ಯವರ್ತಿಗಳು ಪ್ರವೇಶ ಮಾಡಿ, ತಮ್ಮ ಕೆಲಸವನ್ನು ತ್ವರಿತವಾಗಿ ಮಾಡಿಸಿಕೊಳ್ಳುತ್ತಿದ್ದಾರೆ. ಆದರೆ, ಸಾರ್ವಜನಿಕರು ದಿನಗಟ್ಟಲೇ ಕಾಯಬೇಕಾಗಿದೆ ಎಂದು ಜನಸಾಮಾನ್ಯರು ಆರೋಪಿಸಿದ್ದಾರೆ. ಈ ಬಗ್ಗೆ ತಹಶೀಲ್ದಾರ್ ವಿಶೇಷ ಗಮನ ಹರಿಸಿ, ಎಲ್ಲರ ಅರ್ಜಿ ಹಾಗು ಕಡತಗಳನ್ನು ನಿಯಮಾನುಸಾರವೇ ವಿಲೇವಾರಿ ಮಾಡಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು. ಲೋಪ ಕಂಡುಬಂದರೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಸರ್ಕಾರಿ ಕಚೇರಿಗೆ ಬರುವ ಪ್ರತಿಯೊಬ್ಬರಿಗೂ ಗೌರವಯುತವಾಗಿ ಸ್ಪಂದಿಸುವುದು ಅಧಿಕಾರಿಗಳು ಮತ್ತು ಸಿಬ್ಬಂದಿಯ ಜವಾಬ್ದಾರಿ. ಆದರೆ, ಅಧಿಕಾರಿಗಳು ಸೌಜನ್ಯದಿಂದ ವರ್ತಿಸುವುದಿಲ್ಲ. ಅರ್ಜಿದಾರರಿಗೆ ಕಡತದ ಸ್ಥಿತಿ, ಅಗತ್ಯ ದಾಖಲೆಗಳು ಹಾಗು ವಿಲೇವಾರಿಗೆ ಬೇಕಾಗುವ ಸಮಯದ ಬಗ್ಗೆ ಸ್ಪಷ್ಟ ಮಾಹಿತಿ ನೀಡಿದೆ ಅಸಡ್ಡೆ ತೋರುತ್ತಾರೆ. ಹೀಗಾಗಿ ತಮ್ಮ ಕೆಲಸ ಬಿಟ್ಟು ಸರ್ಕಾರಿ ಕಚೇರಿಗಳಿಗೆ ಪದೇಪದೇ ಬರುವ ಸ್ಥಿತಿ ನಿರ್ಮಾಣವಾದೆ.

### ಅಟಲ್ ಜೀ ಕೇಂದ್ರದಲ್ಲಿ ಮತ್ತೊಂದು ಕೌಂಟರ್ ಬೇಡಿಕೆ

ಸಾರ್ವಜನಿಕರ ಅನುಕೂಲಕ್ಕಾಗಿ ಅಟಲ್‌ಜೀ ಕೇಂದ್ರದಲ್ಲಿ ಹೆಚ್ಚುವರಿ ಕೌಂಟರ್ ತೆರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳು ಹಾಗು ಶಾಸಕರು ಗಮನಹರಿಸಬೇಕು. ಪ್ರಸ್ತುತ ಇರುವ ವ್ಯವಸ್ಥೆಯಲ್ಲಿ ಸಾರ್ವಜನಿಕರ ಸಂಖ್ಯೆ ಹೆಚ್ಚಾದ ಸಂದರ್ಭಗಳಲ್ಲಿ ಕಾಯುವ ಸಮಯವೂ ಹೆಚ್ಚಾಗುತ್ತಿದೆ. ಮತ್ತೊಂದು ಕೌಂಟರ್ ಆರಂಭಿಸಿದರೆ ಅರ್ಜಿಗಳ ಸ್ವೀಕಾರ ಹಾಗೂ ಸೇವೆ ಪಡೆಯುವ ಪ್ರಕ್ರಿಯೆ ವೇಗಗೊಳ್ಳುವುದರ ಜೊತೆಗೆ ಸಾರ್ವಜನಿಕರ ಸಮಯವೂ ಉಳಿತಾಯವಾಗಲಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# 5 ದಿನ ಭಾರೀ ಮಳೆ ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ಮಲೆನಾಡು ಜಿಲ್ಲೆಗಳು ಸೇರಿ ಹಳೆ ಮೈಸೂರು ಭಾಗದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ ಐದು ದಿನ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ.

ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಚಾಮರಾಜನಗರ ಸಹಿತ ಕೆಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದ್ದು, ಕೆಲವು ಜಿಲ್ಲೆಗಳಲ್ಲಿ ಯಲ್ಲೋ ಅಲರ್ಟ್‌ನ್ನು ಘೋಷಣೆ ಮಾಡಿದ್ದು, ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಹುದೆಂದು ತಿಳಿಸಲಾಗಿದೆ.

ಸೆ. 29ರ ಮಂಗಳವಾರ ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು,ತುಮಕೂರು ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಭಾರಿ ಮಳೆ ಜೋರಾದ ಗಾಳಿ (30-40 ಕಿಮೀ)ಯೊಂದಿಗೆ ಸುರಿಯುವ ಮುನ್ಸೂಚನೆ ಇದೆ.

ಬಳ್ಳಾರಿ, ಬೆಂಗಳೂರು (ಗ್ರಾಮೀಣ), ಬೆಂಗಳೂರು (ನಗರ) ಸೇರಿ ಹಲವು ಸ್ಥಳಗಳಲ್ಲಿ ಸಂಭವಿಸುತ್ತವೆ. ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೊಡಗು, ಕೋಲಾರ, ರಾಮನಗರ, ಶಿವಮೊಗ್ಗಾ ಮತ್ತು ವಿಜಯನಗರ ಜಿಲ್ಲೆಯಲ್ಲಿ ಗುಡುಗು ಸಹಿತ ಹಗುರದಿಂದ ಸಾಧಾರಣ ಮಳೆ ಮತ್ತು ಜೋರಾದ ಗಾಳಿ (30-40 ಕಿಮೀ) ಸಾಧ್ಯತೆ ಇದೆ.

» ನಾಲ್ಕನೇ ಪುಟದಲ್ಲಿ

> ಮಳೆಗಾಲದ ನಂತರ ಬರುವ ಈ ಋತುವಿನಲ್ಲಿ ಪಿತ್ತದ ಪ್ರಭಾವ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಆಹಾರದ ಆಯ್ಕೆಯಲ್ಲಿ ಸ್ವಲ್ಪ ಹೆಚ್ಚಿನ ಜಾಗ್ರತೆ ಅಗತ್ಯ. ಮಳೆಗಾಲದ ನಂತರ ದೇಹದಲ್ಲಿ ಏನಾಗುತ್ತದೆ? ಆಯುರ್ವೇದವು ವರ್ಷವನ್ನು ಆರು ಋತುಗಳಾಗಿ ವಿಂಗಡಿಸುತ್ತದೆ. ಶಿಶಿರ, ವಸಂತ, ಗ್ರೀಷ್ಮ, ವರ್ಷಾ, ಶರತ್ ಮತ್ತು ಹೇಮಂತ. ಇವುಗಳಲ್ಲಿ ಶರದೃತು ಮಧ್ಯಮ ಬಲದ ಋತು ಎಂದು ಪರಿಗಣಿಸಲಾಗುತ್ತದೆ.

# ಮಳೆ ಹೋಯಿತು ಬಿಸಿಲು ಬಂತು: ಇದೇ ಶರದೃತು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ದಸರೆಯ ಹಬ್ಬದ ಸಂಭ್ರಮ ಶುರುವಾಗುವ ಹೊತ್ತಿಗೆ ವಾತಾವರಣದಲ್ಲೂ ಒಂದು ವಿಶೇಷ ಬದಲಾವಣೆ ಕಾಣಿಸುತ್ತದೆ. ಮಳೆ ಕಡಿಮೆಯಾಗುತ್ತದೆ. ಆಕಾಶ ನಿರ್ಮಲವಾಗುತ್ತದೆ. ಮೋಡಗಳ ನಡುವಿನಿಂದ ಸೂರ್ಯನ ಕಿರಣಗಳು ಮತ್ತೆ ತೀಕ್ಷ್ಣವಾಗಿ ನೆಲಕ್ಕಿಳಿಯುತ್ತವೆ. ಬೆಳಗಿನ ಗಾಳಿಯಲ್ಲಿ ಮಳೆಯ ತೇವದ ಬದಲು ಒಂದು ಬಗೆಯ ಉಷ್ಣತೆ ಕಾಣಿಸಿಕೊಳ್ಳುತ್ತದೆ.

ಹಬ್ಬದ ದಿನಗಳಲ್ಲಿ ನಮ್ಮ ಗಮನ ಸಾಮಾನ್ಯವಾಗಿ ಹೊಸ ಬಟ್ಟೆ, ಸಿಹಿತಿಂಡಿ, ಹಬ್ಬದ ಅಡುಗೆ, ಪ್ರವಾಸ ಮತ್ತು ಬಂಧುಬಳಗದ ಭೇಟಿಗಳ ಕಡೆಗೆ ಇರುತ್ತದೆ. ಆದರೆ ಇದೇ ಸಮಯದಲ್ಲಿ ದೇಹ ತನ್ನದೇ ಆದ ರೀತಿಯಲ್ಲಿ ಋತು ಬದಲಾವಣೆಗೆ ಹೊಂದಿ ಕೊಳ್ಳುತ್ತಿರುತ್ತದೆ. ಮಳೆಗಾಲದಲ್ಲಿ ಬದಲಾಗಿದ್ದ ಜೀರ್ಣಕ್ರಿಯೆ, ಆಹಾರ ಸೇವನೆಯ ಅಭ್ಯಾಸ ಮತ್ತು ದೇಹದ ದೋಷಗಳ ಸ್ಥಿತಿ ಮತ್ತೆ ಹೊಸ ಪರಿಸರಕ್ಕೆ ಹೊಂದಿಕೊಳ್ಳಬೇಕಾಗುತ್ತದೆ.

ಈ ಹೊಂದಾಣಿಕೆಯನ್ನು ನಿರ್ಲಕ್ಷಿಸಿದಾಗ ಸಣ್ಣ ಅಜೀರ್ಣದಿಂದ ಹಿಡಿದು ವಿವಿಧ ಆರೋಗ್ಯ ತೊಂದರೆಗಳವರೆಗೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಪ್ರಕೃತಿಯಲ್ಲಿ ಈ ಬದಲಾವಣೆ ಆಗುತ್ತಿರುವಾಗ ನಮ್ಮ ದೇಹ ಮಾತ್ರ ಅದೇ ಹಳೆಯ ದಿನಚರಿಯಲ್ಲಿ ಮುಂದುವರಿಯಲು ಸಾಧ್ಯವೇ? ಆಯುರ್ವೇದದ ಪ್ರಕಾರ, ಇಲ್ಲ. ಋತು ಬದಲಾಗುವಾಗ ದೇಹವೂ ತನ್ನೊಳಗೆ ಬದಲಾಗುತ್ತದೆ. ಆ ಬದಲಾವಣೆಗೆ ತಕ್ಕಂತೆ ಆಹಾರ ಮತ್ತು ಜೀವನಶೈಲಿಯನ್ನು ಹೊಂದಿಸಿಕೊಳ್ಳುವುದೇ ಋತು ಚರ್ಯೆಯ ಉದ್ದೇಶ. ಈಗ ನಾವು ಪ್ರವೇಶಿಸಿರುವುದು ಶರದೃತು.

ಮಳೆಗಾಲದ ನಂತರ ಬರುವ ಈ ಋತುವಿನಲ್ಲಿ ಪಿತ್ತದ ಪ್ರಭಾವ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಆಹಾರದ ಆಯ್ಕೆಯಲ್ಲಿ ಸ್ವಲ್ಪ ಹೆಚ್ಚಿನ ಜಾಗ್ರತೆ ಅಗತ್ಯ. ಮಳೆಗಾಲದ ನಂತರ ದೇಹದಲ್ಲಿ ಏನಾಗುತ್ತದೆ? ಆಯುರ್ವೇದವು ವರ್ಷವನ್ನು ಆರು ಋತುಗಳಾಗಿ ವಿಂಗಡಿಸುತ್ತದೆ. ಶಿಶಿರ, ವಸಂತ, ಗ್ರೀಷ್ಮ, ವರ್ಷಾ, ಶರತ್ ಮತ್ತು ಹೇಮಂತ. ಇವುಗಳಲ್ಲಿ ಶರದೃತು ಮಧ್ಯಮ ಬಲದ ಋತು ಎಂದು ಪರಿಗಣಿಸಲಾಗುತ್ತದೆ.

ಮಳೆಗಾಲದಲ್ಲಿ ವಾತಾವರಣ ತೇವಾಂಶಪೂರ್ಣವಾಗಿರುತ್ತದೆ. ಈ ಅವಧಿಯಲ್ಲಿ ದೇಹದಲ್ಲಿ ಪಿತ್ತದ ಸಂಚಯಕ್ಕೆ ಅನುಕೂಲವಾದ ಪರಿಸ್ಥಿತಿ ಉಂಟಾಗುತ್ತದೆ. ಮಳೆ ಕಡಿಮೆಯಾಗಿ ಸೂರ್ಯನ ತಾಪ ಮತ್ತೆ ತೀವ್ರವಾದಾಗ, ಸಂಚಿತವಾಗಿದ್ದ ಪಿತ್ತವು ಪ್ರಕುಪಿತವಾಗುತ್ತದೆ. ಅದರ ಪರಿಣಾಮವಾಗಿ ಕೆಲವರಲ್ಲಿ ಜ್ವರ, ಹುಳಿತೇಗು, ಎದೆ ಉರಿ, ಕೈಕಾಲುಗಳಲ್ಲಿ ಉರಿ, ಕಣ್ಣಿನ ತೊಂದರೆ, ಅರ್ಧ ತಲೆನೋವು, ಚರ್ಮದ ಸಮಸ್ಯೆಗಳು, ಸರ್ಪಸುತ್ತು ಮುಂತಾದ ಪಿತ್ತ ಮತ್ತು ರಕ್ತ ಸಂಬಂಧಿತ ತೊಂದರೆಗಳು ಕಾಣಿಸಿಕೊಳ್ಳಬಹುದು.

ಇದಕ್ಕಾಗಿಯೇ ನವರಾತ್ರಿ ಮತ್ತು ದಸರೆಯ ಸಮಯದಲ್ಲಿ ಹಬ್ಬದ ಊಟವನ್ನು ಕೇವಲ ರುಚಿಯ ದೃಷ್ಟಿಯಿಂದ ನೋಡುವುದಕ್ಕಿಂತ, ಋತುವಿಗೆ ಅದು ಹೊಂದಿಕೆಯಾಗುತ್ತದೆಯೇ ಎಂಬುದನ್ನೂ ಗಮನಿಸುವುದು ಮುಖ್ಯ.

**ಶರದೃತುವಿನ ತಟ್ಟೆಯ ಮೂಲಮಂತ್ರ:** ಈ ಋತುವಿನಲ್ಲಿ ಆಹಾರ ಆಯ್ಕೆ ಮಾಡುವಾಗ ಒಂದು ಸರಳ ಸೂತ್ರವನ್ನು ನೆನಪಿಟ್ಟುಕೊಳ್ಳಬಹುದು: ಮಧುರ + ತಿಕ್ತ + ಕಷಾಯ, ಪಿತ್ತಕ್ಕೆ ಹಿತಕರ.

ಅಂದರೆ ಸಿಹಿ, ಕಹಿ ಮತ್ತು ಒಗರು ರುಚಿಗಳಿರುವ ಆಹಾರಗಳಿಗೆ ಆದ್ಯತೆ ನೀಡುವುದು ಉತ್ತಮ. ಜೀರ್ಣಿಸಲು ಸುಲಭವಾದ, ಹೆಚ್ಚು ಜಡವಾಗಿರದ ಆಹಾರ ಈ ಕಾಲದಲ್ಲಿ ಸೂಕ್ತ.

ಹಿಂದಿನ ವರ್ಷದ ಧಾನ್ಯಗಳನ್ನು ಬಳಸುವುದು ಆಯುರ್ವೇದದಲ್ಲಿ ಪ್ರಶಸ್ತವೆಂದು ಹೇಳಲಾಗಿದೆ. ಅಕ್ಕಿ, ಗೋಧಿ, ಜವೆ, ಜೋಳ, ರಾಗಿ ಮುಂತಾದ ಧಾನ್ಯಗಳನ್ನು ನಮ್ಮ ಪ್ರಾದೇಶಿಕ ಆಹಾರ ಪದ್ಧತಿಗೆ ಅನುಗುಣವಾಗಿ ಬಳಸಬಹುದು. ಅನ್ನವಾಗಲಿ, ರವೆಯಾಗಲಿ, ನುಚ್ಚಾಗಲಿ ಅಥವಾ ಹಿಟ್ಟಿನ ರೂಪವಾಗಲಿ, ಆಹಾರ ಸರಳವಾಗಿರುವುದು ಮುಖ್ಯ.

**ಉಪವಾಸ ಹೇಗಿರಬೇಕು:** ಉಪವಾಸ ಎಂದರೆ ಏನು ಬೇಕಾದರೂ ತಿನ್ನುವುದಲ್ಲ! ಇಂದಿನ ದಿನಗಳಲ್ಲಿ ಉಪವಾಸಕ್ಕೂ ಒಂದು ವಿಶಿಷ್ಟ ಮೆನು ಇದೆ! ಹುಳಿ ಹಾಕಿದ ಅವಲಕ್ಕಿ, ಗೊಜ್ಜು ಅವಲಕ್ಕಿ, ಅವಲಕ್ಕಿ ಮತ್ತು ಮೊಸರು ಮುಂತಾದವುಗಳನ್ನು




ಉಪವಾಸದ ಆಹಾರವೆಂದು ಪರಿಗಣಿಸುವ ಅಭ್ಯಾಸ ಕೆಲವರಲ್ಲಿದೆ. ಆದರೆ ಶರದೃತುವಿನಲ್ಲಿ ಇಂತಹ ಸಂಯೋಜನೆಗಳು ಪಿತ್ತವನ್ನು ಮತ್ತಷ್ಟು ಕೆರಳಿಸಬಹುದು. ಹಾಗೆಯೇ ಹಲವು ದಿನ ಫ್ರಿಜ್‌ನಲ್ಲಿ ಇಟ್ಟು ಹುಳಿಯಾಗಿರುವ ಇಡ್ಲಿ ಅಥವಾ ದೋಸೆ ಹಿಟ್ಟನ್ನು ಬಳಸುವ ಅಭ್ಯಾಸವೂ ಉತ್ತಮವಲ್ಲ. ಹಿಟ್ಟನ್ನು ಸಾಧ್ಯವಾದಷ್ಟು ತಾಜಾವಾಗಿ ಬಳಸುವುದು ಒಳಿತು. ಇದೇ ವಿಚಾರ ಚಪಾತಿ ಹಿಟ್ಟಿಗೂ ಅನ್ವಯಿಸುತ್ತದೆ. ಉಪವಾಸ ಎಂಬ ಹೆಸರಿದ್ದರೆ ಆಹಾರ ಸ್ವಯಂಚಾಲಿತವಾಗಿ ಪಥ್ಯವಾಗುವುದಿಲ್ಲ. ಆಹಾರದ ಗುಣ, ಸಂಯೋಜನೆ ಮತ್ತು ಋತುವಿನ ಹೊಂದಾಣಿಕೆ ಮುಖ್ಯ.

**ಬೇಳೆ ಮತ್ತು ಕಾಳುಗಳಲ್ಲೂ ಆಯ್ಕೆ ಬೇಕು:** ಎಲ್ಲಾ ಬೇಳೆಗಳೂ ಒಂದೇ ರೀತಿಯಲ್ಲ. ಹೆಸರು ಬೇಳೆ, ತೊಗರಿಬೇಳೆ, ಚೆನ್ನಂಗಿ ಬೇಳೆ ಮತ್ತು ಮೆಂತ್ಯೆ ಮುಂತಾದವುಗಳನ್ನು ಈ ಋತುವಿನಲ್ಲಿ ಬಳಸಬಹುದು. ಇನ್ನೊಂದೆಡೆ ಸಿಪ್ಪೆಸಹಿತ ಕಾಳುಗಳು, ಮೊಳಕೆ ಕಾಳುಗಳು ಮತ್ತು ಕೆಲವು ಜೀರ್ಣಕ್ಕೆ ಜಡವಾದ ದ್ವಿದಳ ಧಾನ್ಯಗಳನ್ನು ಪ್ರತಿದಿನ ಸೇವಿಸುವುದನ್ನು ತಪ್ಪಿಸುವುದು ಉತ್ತಮ. ಅವರೆ, ಉದ್ದು, ಹುರಳಿ, ಅಲಸಂದೆ, ಬಟಾಣಿ, ರಾಜ್ಮಾ ಮುಂತಾದವುಗಳನ್ನು ಮಿತಿಯಲ್ಲಿ ಇಡಬಹುದು. ಉದ್ದನ್ನು ಸಂಪೂರ್ಣವಾಗಿ ಬಿಡಬೇಕೆಂದಿಲ್ಲ. ಸಾಂದರ್ಭಿಕ ಬಳಕೆ ಮಾಡಬಹುದು. ಸೋಯಾ ಬೀನ್ ಮುಂತಾದ ಕೆಲವು ದ್ವಿದಳಧಾನ್ಯಗಳು ಎಲ್ಲರಿಗೂ ಸಮಾನವಾಗಿ ಹೊಂದುವುದಿಲ್ಲ ಎಂಬುದನ್ನೂ ಗಮನಿಸಬೇಕು.

**ಹಬ್ಬದ ಸಿಹಿಗೂ ಋತುಚರ್ಯೆಯ ಸ್ಪರ್ಶ:** ಶರದೃತು ಎಂದಾಕ್ಷಣ ಸಿಹಿತಿಂಡಿಗೆ ಸಂಪೂರ್ಣ ವಿದಾಯ ಹೇಳಬೇಕೆಂದೇನಿಲ್ಲ! ಅಕ್ಕಿ, ಗೋಧಿ ಅಥವಾ ರಾಗಿಯಿಂದ ತಯಾರಿಸಿದ ಹಾಲ್ಬಾಯಿ, ಕುಂಬಳಕಾಯಿ ಹಲ್ವಾ, ಕಾಯಿ ಹೋಳಿಗೆ, ಹೆಸರುಬೇಳೆ ಹೋಳಿಗೆ, ಹೆಸರುಬೇಳೆಯ ಸಿಹಿತಿನಿಸುಗಳು ಮುಂತಾದವುಗಳನ್ನು ಸೂಕ್ತ ಪ್ರಮಾಣದಲ್ಲಿ ಸೇವಿಸಬಹುದು. ಪೊಂಗಲ, ಸಜ್ಜಿಗೆ, ಹಾಲಿನ ಪಾಯಸಗಳು ಮತ್ತು ಕಬ್ಬಿನ ಹಾಲಿನಿಂದ ತಯಾರಿಸಿದ ಪದಾರ್ಥಗಳೂ ಈ ಋತುವಿನಲ್ಲಿ ಬಳಸಬಹುದಾದ ಆಹಾರಗಳು. ಅಂದರೆ ಹಬ್ಬದ ಊಟದಲ್ಲಿ ಪ್ರಮಾಣ ಮತ್ತು ಆಯ್ಕೆ ಎರಡನ್ನೂ ಗಮನಿಸಿದರೆ ಸಂಭ್ರಮವೂ ಉಳಿಯುತ್ತದೆ, ಆರೋಗ್ಯವೂ ಉಳಿಯುತ್ತದೆ.

**ತರಕಾರಿಗಳ ಆಯ್ಕೆ:** ನಮ್ಮ ಅಡುಗೆಮನೆಯಲ್ಲಿ ಯಾವ ತರಕಾರಿಗಳು ಇರಬೇಕು? ಶರದೃತುವಿನಲ್ಲಿ ಸ್ವಲ್ಪ ಕಹಿ ಅಥವಾ ಒಗರು ರುಚಿಯ ತರಕಾರಿಗಳಿಗೆ ಆದ್ಯತೆ ನೀಡಬಹುದು. ಹೀರೆಕಾಯಿ, ಪಡವಲಕಾಯಿ, ಬಣ್ಣದ ಸೌತೆಕಾಯಿ, ಹಾಗಲಕಾಯಿ, ಹಾಲುಗುಂಬಳ, ಬೂದುಗುಂಬಳ ಮತ್ತು ಚೌಳಿಕಾಯಿ ಮುಂತಾದವುಗಳನ್ನು ಅಡುಗೆಯಲ್ಲಿ ಸೇರಿಸಬಹುದು. ಸೊಪ್ಪುಗಳಲ್ಲಿ ಹರಿವೆ, ಪಾಲಕ್, ಮೆಂತ್ಯೆ, ಚಕೋತ ಸೊಪ್ಪು ಮತ್ತು ಕೊತ್ತಂಬರಿ ಸೊಪ್ಪುಗಳು ಉತ್ತಮ ಆಯ್ಕೆಗಳು.

ಮೆಂತ್ಯೆ ತಂಬುಳಿ, ಹೀರೆಕಾಯಿ ತಂಬುಳಿ, ಪಡವಲಕಾಯಿ ತಂಬುಳಿ ಅಥವಾ ಅಮೃತಬಳ್ಳಿ ಚಿಗುರಿನ ತಂಬುಳಿಯಂತಹ ಸಾಂಪ್ರದಾಯಿಕ ಅಡುಗೆಗಳು ಈ ಋತುವಿನ ತಟ್ಟೆಗೆ ಸೂಕ್ತವಾದ ಸೇರ್ಪಡೆಗಳು.

**ಖಾರ ಕಡಿಮೆಯಾದರೆ ಅಡುಗೆ ರುಚಿ:** ನಮ್ಮ ನಾಲಿಗೆಗೆ ಖಾರ ಇಷ್ಟವಾದರೂ, ಋತುವಿಗೆ ಅದು ಯಾವಾಗಲೂ ಇಷ್ಟವಾಗಬೇಕೆಂದಿಲ್ಲ! ಪಿತ್ತದ ಪ್ರಭಾವ ಹೆಚ್ಚಾಗುವ ಶರದೃತುವಿನಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಪುದಿನ, ಚಕ್ಕೆ, ಮೆಣಸು, ತಾಜಾ ಶುಂಠಿ ಮುಂತಾದ ಉಷ್ಣಕಾರಕ ಮಸಾಲೆಗಳನ್ನು ಅತಿಯಾಗಿ ಬಳಸುವುದನ್ನು ಕಡಿಮೆ ಮಾಡುವುದು ಉತ್ತಮ.

ಖಾರ ಬೇಕಾದರೆ ಒಣ ಶುಂಠಿ ಮತ್ತು ಒಣ ಮೆಣಸನ್ನು ಮಿತವಾಗಿ ಬಳಸಬಹುದು. ಹುಳಿಗಾಗಿ ಟೊಮ್ಯಾಟೊವನ್ನು ಹೆಚ್ಚಾಗಿ ಅವಲಂಬಿಸುವ ಬದಲು ನೆಲ್ಲಿಪುಡಿ, ಹಳೆಯ ಹುಣಸೆಹಣ್ಣು ಅಥವಾ ದಾಳಿಂಬೆಯ ಹುಳಿಯನ್ನು ಬಳಸಬಹುದು. ಉಪ್ಪಿನಲ್ಲಿ ಸೈಂಧವ ಲವಣವನ್ನು ಬಳಸಬಹುದು.

**ತೆಂಗಿನಕಾಯಿ, ಎಳನೀರು ಮತ್ತು ಸಿಹಿ ಹಣ್ಣುಗಳು:** ಶರದೃತುವಿನಲ್ಲಿ ತೆಂಗಿನಕಾಯಿ ಮತ್ತು ತೆಂಗಿನ ಹಾಲಿನಿಂದ ತಯಾರಿಸಿದ ಅಡುಗೆಗಳು ಹಿತಕರವಾಗಿರಬಹುದು. ಎಳನೀರನ್ನೂ ಸೇವಿಸಬಹುದು. ಹಣ್ಣುಗಳಲ್ಲಿ ದಾಳಿಂಬೆ, ಸಪೋಟ, ಸೀತಾಫಲ, ಅಂಜೂರ ಮತ್ತು ಖರ್ಜೂರ ಮುಂತಾದ ಸಿಹಿ ಹಾಗೂ ತಂಪು ಗುಣದ ಹಣ್ಣುಗಳನ್ನು ಆಯ್ಕೆ ಮಾಡಬಹುದು. ದೈನಂದಿನ ಆಹಾರದಲ್ಲಿ ತುಪ್ಪಕ್ಕೂ ಸ್ಥಾನವಿರಲಿ. ಹಾಲು ಮತ್ತು ಬೆಣ್ಣೆಯನ್ನು ಬಳಸಬಹುದು. ಆದರೆ ಮೊಸರು, ಹುಳಿ ಮಜ್ಜಿಗೆ, ಚೀಸ್ ಮತ್ತು ಪನ್ನೀರ್‌ಗಳ ನಿರಂತರ ಸೇವನೆಯನ್ನು ಕಡಿಮೆ ಮಾಡುವುದು ಉತ್ತಮ. ಮೊಸರು ತಂಪಾಗಿದೆ ಎಂಬ ಕಾರಣಕ್ಕೆ ಅದು ಶರದೃತುವಿನಲ್ಲಿ ಎಲ್ಲರಿಗೂ ಸೂಕ್ತ ಎಂದು ಭಾವಿಸುವುದು ಸರಿಯಲ್ಲ.



ಆಯುರ್ವೇದದ ಪ್ರಕಾರ ಮೊಸರು ದೇಹದ ಉಷ್ಣತೆಯನ್ನು ಹೆಚ್ಚಿಸುವ ಸ್ವಭಾವ ಹೊಂದಿದ್ದು, ಪಿತ್ತ ಮತ್ತು ರಕ್ತದ ಸಮಸ್ಯೆ ಇರುವವರಿಗೆ ವಿಶೇಷವಾಗಿ ಗಮನ ಅಗತ್ಯ. ಆಯುರ್ವೇದದಲ್ಲಿ ಶರದೃತುವಿನಲ್ಲಿ ಮೊಸರಿನ ಸೇವನೆಗೆ ವಿಶೇಷ ನಿರ್ಬಂಧವಿದೆ. ಅದರಲ್ಲೂ ರಾತ್ರಿ ಸಮಯದಲ್ಲಿ ಮೊಸರು ಸೇವಿಸುವುದನ್ನು ಸಂಪೂರ್ಣವಾಗಿ ತಪ್ಪಿಸುವುದು ಉತ್ತಮ. ಮೊಸರಿನ ಬದಲು ಸ್ವಲ್ಪವೂ ಹುಳಿಯಿಲ್ಲದ ಮೊಸರಿಗೆ ಸಾಕಷ್ಟು ನೀರು ಸೇರಿಸಿ ಚೆನ್ನಾಗಿ ಕಡೆದು ತಯಾರಿಸಿದ ಮಜ್ಜಿಗೆಯನ್ನು ಬಳಸಬಹುದು. ಇದಕ್ಕೆ ಸ್ವಲ್ಪ ಸಕ್ಕರೆ ಸೇರಿಸಿ ತಯಾರಿಸುವ ಸಿಹಿ ಮಜ್ಜಿಗೆ ಶರದೃತುವಿನಲ್ಲಿ ಹೆಚ್ಚು ಹಿತಕರವಾದ ಆಯ್ಕೆಯಾಗಿದೆ.

**ಕರಿದ ತಿಂಡಿ ತಿನ್ನಲೇಬಾರದೇ? :** ದಸರೆಯ ಹಬ್ಬದಲ್ಲಿ ಕರಿದ ತಿಂಡಿಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದು ಕಷ್ಟವಾಗಬಹುದು. ಆದರೆ ತಿಂಡಿಯಷ್ಟೇ ಮುಖ್ಯ ಅದರ ತಯಾರಿಕೆಯ ವಿಧಾನ ಮತ್ತು ಸಂಗ್ರಹಣೆ. ತುಪ್ಪ ಅಥವಾ ಬೆಣ್ಣೆಯಲ್ಲಿ ತಯಾರಿಸಿದ ಕರಿದ ಪದಾರ್ಥಗಳನ್ನು ಮಿತವಾಗಿ ಸೇವಿಸಬಹುದು. ತುಪ್ಪ ಮತ್ತು ಉತ್ತಮ ಗುಣಮಟ್ಟದ ಫಿಲ್ಟರ್ಡ್ ಎಣ್ಣೆಯನ್ನು ಸೇರಿಸಿ ಬಳಸಬಹುದು. ಆದರೆ ತಿಂಡಿಗಳನ್ನು ತಯಾರಿಸಿ ತಿಂಗಳುಗಟ್ಟಲೆ ಇಟ್ಟು ಸೇವಿಸುವುದು ಮಾತ್ರ ಒಳ್ಳೆಯ ಅಭ್ಯಾಸವಲ್ಲ. ತಾಜಾ ಆಹಾರ, ಕಡಿಮೆ ಸಂಗ್ರಹಣೆ, ಮಿತ ಪ್ರಮಾಣ ಎಂಬ ಮೂರು ವಿಚಾರಗಳು ಹಬ್ಬದ ದಿನಗಳಲ್ಲೂ ನೆನಪಿರಲಿ.

**ಹಾಲು, ಮಜ್ಜಿಗೆ ಮತ್ತು ತಂಬುಳಿ, ಒಂದೇ ವರ್ಗವಲ್ಲ:** ಈ ಋತುವಿನಲ್ಲಿ ಹಾಲು ಮತ್ತು ಬೆಣ್ಣೆ ಬಳಸಬಹುದಾದರೂ, ಹುಳಿ ಮಜ್ಜಿಗೆ ಅಥವಾ ಮೊಸರಿನ ನಿರಂತರ ಬಳಕೆಯನ್ನು ತಪ್ಪಿಸುವುದು ಉತ್ತಮ. ಅದರ ಬದಲಿಗೆ ಕಹಿ ಮತ್ತು ಒಗರು ಪದಾರ್ಥಗಳಿಂದ ತಯಾರಿಸಿದ ತಂಬುಳಿಗಳನ್ನು ಬಳಸಬಹುದು. ಇದು ನಮ್ಮ ಸಾಂಪ್ರದಾಯಿಕ ಅಡುಗೆ ಪದ್ಧತಿಯಲ್ಲಿರುವ ಒಂದು ಸುಂದರವಾದ ಋತುಜ್ಞಾನವೇ ಸರಿ.

**ಮಾಂಸಾಹಾರಿಗಳಿಗೆ:** ಮಾಂಸಾಹಾರ ಸೇವಿಸುವವರು ನೀರು ಬಾತು ಕೋಳಿ ಮೊಟ್ಟೆ, ಕೋಳಿ ಮೊಟ್ಟೆಯ ಬಿಳಿಭಾಗ, ಆಡಿನ ಮಾಂಸ ಮತ್ತು ಸಿಹಿನೀರಿನ ಸಣ್ಣ ಮೀನುಗಳನ್ನು ಆಯ್ಕೆ ಮಾಡಬಹುದು. ಸಮುದ್ರ ದ ಜೀವಿಗಳ ಸೇವನೆಯನ್ನು ಕಡಿಮೆ ಮಾಡುವುದು ಉತ್ತಮ. ಮಾಂಸಾಹಾರದ ಜೊತೆಗೆ ಹಾಲು ಅಥವಾ ಮೊಸರನ್ನು ಸೇವಿಸುವುದನ್ನೂ ತಪ್ಪಿಸುವುದು ಸೂಕ್ತ.

**ನೀರಿಗೂ ಋತುಚರ್ಯೆ ಬೇಕು:** ಶರದೃತುವಿನಲ್ಲಿ ಕೇವಲ ಆಹಾರವಲ್ಲ, ನೀರಿನ ಆಯ್ಕೆಯಲ್ಲೂ ಸ್ವಲ್ಪ ಗಮನ ಕೊಡಬಹುದು. ಕೊತ್ತಂಬರಿ ಬೀಜದ ಪುಡಿ ಅಥವಾ ಒಣ ಶುಂಠಿಯ ಪುಡಿಯನ್ನು ನೀರಿಗೆ ಹಾಕಿ ಕುದಿಸಿ ಬಳಸಬಹುದು. ದಿನವಿಡೀ ಬಾಯಾರಿಕೆಗೆ ಅನುಗುಣವಾಗಿ ಇದನ್ನು ಸೇವಿಸಬಹುದು. ಒಣದ್ರಾಕ್ಷಿ ನೀರು, ಲಾವಂಚ ನೀರು ಮತ್ತು ಭದ್ರಮುಷ್ಟಿ ನೀರನ್ನೂ ಬಳಸಬಹುದು. ಎಳನೀರು ಸಹ ಉತ್ತಮ ಆಯ್ಕೆ. ಹಬ್ಬದ ದಿನ ಭೂರಿ ಭೋಜನ ಮಾಡಿ ಅಜೀರ್ಣ, ಹುಳಿತೇಗು ಅಥವಾ ಎದೆ ಉರಿ ಉಂಟಾದಾಗಲೂ ಇಂತಹ ಸರಳ ಪಾನೀಯಗಳು ಉಪಯುಕ್ತವಾಗಬಹುದು. ಆದರೆ ನೀರು ಕುಡಿಯುವುದಕ್ಕೂ ಒಂದು ಸರಳ ನಿಯಮವಿದೆ. ಬಾಯಾರಿಕೆಯನ್ನು ಗಮನಿಸಿ ಕುಡಿಯಿರಿ. ಊಟದ ಸಂದರ್ಭದಲ್ಲಿ ಅಗತ್ಯವಿರುವಷ್ಟು ಸ್ವಲ್ಪ ಸ್ವಲ್ಪವಾಗಿ ಸೇವಿಸಬಹುದು.

**ಋತುವನ್ನು ಅನುಸರಿಸುವುದೇ ನಿಜವಾದ ಹೆಲ್ತ್ ಟ್ರೆಂಡ್:** ಇಂದು ಆರೋಗ್ಯದ ಬಗ್ಗೆ ತಿಳಿದು ಕೊಳ್ಳಲು ನಮ್ಮ ಮುಂದೆ ಸಾವಿರಾರು ರೀಲ್ಸ್, ವಿಡಿಯೋಗಳು ಮತ್ತು ಸಲಹೆಗಳಿವೆ. ಆದರೆ ಎಲ್ಲರಿಗೂ, ಎಲ್ಲ ಕಾಲದಲ್ಲೂ ಒಂದೇ ಸಲಹೆ ಅನ್ವಯಿಸುವುದಿಲ್ಲ. ಹೇಮಂತದಲ್ಲಿ ಶಕ್ತಿವರ್ಧಕವಾಗಿರುವ ಆಹಾರ ಅಥವಾ ವ್ಯಾಯಾಮ ಗ್ರೀಷ್ಮದಲ್ಲಿ ಸೂಕ್ತವಾಗದೇ ಇರಬಹುದು. ಒಂದು ಋತುವಿನಲ್ಲಿ ಹಿತವಾಗಿರುವ ಪದಾರ್ಥ ಮತ್ತೊಂದು ಋತುವಿನಲ್ಲಿ ಅಷ್ಟೇ ಹಿತಕರವಾಗಿರಬೇಕೆಂದಿಲ್ಲ. ಆದ್ದರಿಂದ ಆರೋಗ್ಯಕರ ಜೀವನಶೈಲಿಗೆ ನಮ್ಮ ರೆಫರೆನ್ಸ್ ಪಾಯಿಂಟ್ ಯಾವುದೋ ಒಂದು ಟ್ರೆಂಡಿಂಗ್ ವಿಡಿಯೋ ಆಗುವುದಕ್ಕಿಂತ ಪ್ರಕೃತಿಯ ಋತುಚಕ್ರವೇ ಆಗಬೇಕು. ಶರದೃತು ನಮಗೆ ಹೇಳುವ ಪಾಠವೂ ಇದೇ. ಪ್ರಕೃತಿ ಬದಲಾಗುವಾಗ, ನಮ್ಮ ತಟ್ಟೆಯೂ ಸ್ವಲ್ಪ ಬದಲಾಗಲಿ. ಪಿತ್ತವನ್ನು ಶಮನಗೊಳಿಸುವ ಸರಳ, ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಆರಿಸಿಕೊಳ್ಳೋಣ. ಹಬ್ಬವನ್ನು ಮನಸಾರೆ ಆಚರಿಸೋಣ; ಆದರೆ ಹಬ್ಬದ ಸಂಭ್ರಮದ ಬೆಲೆ ನಮ್ಮ ಜೀರ್ಣಾಂಗ ಮತ್ತು ಆರೋಗ್ಯವಾಗದಂತೆ ನೋಡಿಕೊಳ್ಳೋಣ. ಋತುವನ್ನು ಅರಿತು ಬದುಕುವುದು ಎಂದರೆ ಪ್ರಕೃತಿಯೊಂದಿಗೆ ಹೆಜ್ಜೆ ಹಾಕುವುದು. ನಮ್ಮ ಹಿರಿಯರು ಋತುಗಳಿಗೆ ತಕ್ಕಂತೆ ಆಹಾರ ಪದ್ಧತಿಗಳನ್ನು ರೂಪಿಸಿಕೊಂಡಿದ್ದರು. ಹಿಂದೆ ಕೇವಲ ಸಂಪ್ರದಾಯವಲ್ಲ, ದೇಹ ಮತ್ತು ಪ್ರಕೃತಿಯ ನಡುವಿನ ಸೂಕ್ಷ್ಮ ಸಂಬಂಧದ ಅರಿವೂ ಇತ್ತು. ಇಂದು ನಮ್ಮ ಜೀವನಶೈಲಿ ವೇಗವಾಗಿ ಬದಲಾಗುತ್ತಿದ್ದರೂ, ಆ ಮೂಲ ಜ್ಞಾನವನ್ನು ಆಧುನಿಕ ಬದುಕಿಗೆ ಅರ್ಥಪೂರ್ಣವಾಗಿ ಅಳವಡಿಸಿಕೊಳ್ಳಬಹುದು.

ಹಬ್ಬದ ದಿನಗಳಲ್ಲಿ ವೈವಿಧ್ಯಮಯ ಆಹಾರಗಳನ್ನು ಸವಿಯುವುದು ತಪ್ಪಲ್ಲ, ಆದರೆ ದೇಹದ ಸೂಚನೆಗಳನ್ನು ಆಲಿಸಿ, ಹಸಿವಿಗೆ ತಕ್ಕಂತೆ ತಿನ್ನುವುದು, ಅತಿಭೋಜನವನ್ನು ತಪ್ಪಿಸುವುದು ಮತ್ತು ಋತುವಿಗೆ ಹೊಂದುವ ಆಹಾರವನ್ನು ಆಯ್ಕೆ ಮಾಡುವುದು ನಮ್ಮ ಕೈಯಲ್ಲಿದೆ. ಪ್ರಕೃತಿಯ ಲಯವನ್ನು ಗೌರವಿಸಿದಾಗ, ಆರೋಗ್ಯವೂ ನಮ್ಮ ದೈನಂದಿನ ಬದುಕಿನ ಸಹಜ ಭಾಗವಾಗುತ್ತದೆ.

**– ಡಾ. ಸಾಧನಾ** ಶ್ರೀ ಪಿ,



## ಬಸ್ ಡಿಕ್ಕಿ: ವ್ಯಕ್ತಿ ಸಾವು

**ಚನ್ನರಾಯಪಟ್ಟಣ:** ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಶ್ರವಣಬೆಳಗೊಳದ ದೇವೇಗೌಡ ವೃತ್ತದ ಬಳಿ ನಡೆದಿದೆ. ಮಂಡ್ಯ ಜಿಲ್ಲೆ ದೊಡ್ಡ ಸೋಮನಹಳ್ಳಿಯ ಸಂದೀಪ್ ಮೃತರು. ಕೆಲಸ ಮುಗಿಸಿ ಭಾನುವಾರ ರಾತ್ರಿ 8ರ ಸಮಯದಲ್ಲಿ ನಾಗಯ್ಯನ ಕೊಪ್ಪಲಿನಿಂದ ಊರಿಗೆ ಹೋಗುತ್ತಿದ್ದಾಗ ಎದುರು ಗಡೆಯಿಂದ ವೇಗವಾಗಿ ಬಂದ ಬಸ್ ಡಿಕ್ಕಿಯಾಗಿದೆ. ಗಂಭೀರ ಗಾಯ ಗೊಂಡಿದ್ದ ಸಂದೀಪ್ ಅವರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

## ಚಿನ್ನದ ಸರ ಕಿತ್ತುಕೊಂಡು ಪರಾರಿ

**ಆಲೂರು:** ಮನೆಯಂಗಳ ಕಸ ಗುಡಿಸುತ್ತಿದ್ದ ಮಹಿಳೆಯ ಬಳಿ ಬಂದ ಅಪರಿಚಿತನೊಬ್ಬ ಕೊರಳಲ್ಲಿದ್ದ 40 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ತಾಲ್ಲೂಕಿನ ಕೆ.ಹೊಸ ಕೋಟೆಯಲ್ಲಿ ನಡೆದಿದೆ.

ಜಗದಾಂಬ ಅವರು ಕಸ ಗುಡಿಸುತ್ತಿದ್ದಾಗ ಅಪರಿಚಿತ ಇಬ್ಬರು ಬೈಕ್‌ನಲ್ಲಿ ಬಂದಿದ್ದಾರೆ. ವಿಳಾಸ ಕೇಳುವ ನೆಪದಲ್ಲಿ ಹಿಂದೆ ಕುಳಿತಿದ್ದವ ಕೆಳಗಿಳಿದು ಬಂದಿದ್ದು ಮಹಿಳೆ ಆತನ ಬಳಿಗೆ ಹೋಗುತ್ತಿದ್ದಂತೆ ಕೊರಳಿಗೆ ಕೈ ಹಾಕಿ ಸರ ಕಿತ್ತುಕೊಂಡು ಬೈಕ್‌ನಲ್ಲಿ ಪರಾರಿಯಾಗಿದ್ದಾರೆ.

# ಸಾಲ ಮನ್ನಾಕ್ಕೆ ಬಾಲಕೃಷ್ಣ ಆಗ್ರಹ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಾಜ್ಯದಲ್ಲಿ ರೈತರು ಮಳೆ ಬೆಳೆ ಇಲ್ಲದೆ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ರಾಜ್ಯದ ಕಾಂಗ್ರೆಸ್ ಸರ್ಕಾರ ರೈತರ ನೆರವಿಗೆ ನಿಲ್ಲುವ ಮೂಲಕ ಸಹಕಾರಿ ಬ್ಯಾಂಕುಗಳಲ್ಲಿ ಕನಿಷ್ಠ 1 ಲಕ್ಷ ಸಾಲ ಮನ್ನಾ ಮಾಡುವಂತೆ ಶಾಸಕ ಸಿ.ಎನ್. ಬಾಲಕೃಷ್ಣ ಅವರು ಒತ್ತಾಯಿಸಿದರು.

ತಾಲ್ಲೂಕಿನ ಅತ್ತಿಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2025–26ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ತೀವ್ರ ಬರಗಾಲದಿಂದ ಸಂಕಷ್ಟದಲ್ಲಿದ್ದು ಅದರಿಂದ ಕೃಷಿ ಚಟುವಟಿಕೆಗಳಿಗಾಗಿ ಸಹಕಾರ ಬ್ಯಾಂಕುಗಳಲ್ಲಿ ರೈತರು ಪಡೆದಿರುವ ಕನಿಷ್ಠ 1 ಲಕ್ಷದವರೆಗೆ ಸಾಲ ಮನ್ನಾ ಮಾಡುವ ಮೂಲಕ ರೈತರ ನೆರವಿಗೆ ಸರ್ಕಾರ ದಾವಿಸ ಬೇಕಾಗಿದೆ. ಈ ಬಗ್ಗೆ ಮುಖ್ಯ ಮಂತ್ರಿಗಳು ಶೀಘ್ರ ನಿರ್ಧಾರ ಕೈಗೊಳ್ಳುವ ಮೂಲಕ ಸಾಲ ಮನ್ನದ ಘೋಷಣೆ ಮಾಡುವಂತೆ ಒತ್ತಾಯಿಸಿದರು.



ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ ಹಾಲು ಉತ್ಪಾದಕರ ಸಹಕಾರದಿಂದ 32 ಲಕ್ಷ ಲಾಭ ಗಳಿಸಿದ್ದು, ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆಯಿಂದ 1,300 ಲೀಟರ್ ಹಾಲು ಬರುತ್ತಿದೆ. ಗ್ರಾಮದಲ್ಲಿ ಸುಮಾರು 65 ಲಕ್ಷ ರೂ. ವೆಚ್ಚದಲ್ಲಿ ನೂತನ ಆರೋಗ್ಯ ಕಟ್ಟಡ ನಿರ್ಮಾಣ, ಅಂಗನವಾಡಿ, ಶಾಲಾ ಕಟ್ಟಡ ರಿಪೇರಿಗೆ ಅನುದಾನ, ಸರ್ಕಾರಿ ಶಾಲೆಯಲ್ಲಿ ಶುದ್ಧ ನೀರಿನ ಘಟಕ ಸ್ಥಾಪನೆ, ವಿವಿಧ ರಸ್ತೆಗಳ ಅಭಿವೃದ್ಧಿಗೆ ಅನುದಾನ, ನಿರಂತರ ಜ್ಯೋತಿ ವ್ಯವಸ್ಥೆ ಹಾಗು ಗ್ರಾಮದ ಮುಂಭಾಗದ ಕೆರೆಗೆ ತೋಟಿ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಹಾಲಿಂಗೇಗೌಡ ಅವರು ಮಾತನಾಡಿ, ಸಂಘದಲ್ಲಿ ಹಾಲು ಮಾರಾಟ ಮತ್ತು ಪಡಿತರ ಧಾನ್ಯ ವಿತರಣೆಯಿಂದ ಕಳೆದ 2025–26ನೇ ಸಾಲಿನಲ್ಲಿ ಸಂಘ 9.50 ಲಕ್ಷ ರೂ. ಲಾಭಗಳಿಸುವ ಮೂಲಕ ಇಡೀ ಜಿಲ್ಲೆಗೆ ಮಾದರಿ ಹಾಲು ಉತ್ಪಾದಕರ ಸಹಕಾರ ಸಂಘವಾಗಿ ಹೊರ ಹೊಮ್ಮಿದೆ. ಹಾಲು ಉತ್ಪಾದಕರ ಸಹಕಾರದಿಂದ ಸಂಘ ಹೆಚ್ಚು ಲಾಭ ಗಳಿಸಲು ಸಾಧ್ಯವಾಗಿದೆ. 2024 ರಿಂದ 2026ನೇ ಸಾಲಿನವರೆಗೆ ಹಾಲು ಉತ್ಪಾದಕರಿಗೆ ಲಾಭಾಂಶ ನೀಡಲು ಆಡಳಿತ ಮಂಡಳಿ ನಿರ್ಧರಿಸಿರುವುದು ಒಳ್ಳೆಯ ಕೆಲಸವಾಗಿದೆ ಎಂದರು.

ಹಾಸನ ಹಾಲು ಒಕ್ಕೂಟದ ಸಹಾಯಕ ವಿಸ್ತಾರಣಾಧಿಕಾರಿ ಸಿ.ಸಿ. ಯೋಗೀಶ್, ಸಂಘದ ಅಧ್ಯಕ್ಷ ಚಂದ್ರೇಗೌಡ, ಉಪಾಧ್ಯಕ್ಷ ಯೋಗೇಶ್, ನಿರ್ದೇಶಕರಾದ ಅಶೋಕ್, ಗೋವಿಂದೇಗೌಡ, ವೆಂಕಟೇಶ್, ಎ.ಎಸ್.ಧನಂಜಯ, ನಾಗರತ್ನ (ಸ್ಮಿತಾ), ಕೆ.ಎನ್.ಮಂಗಳ, ಭಾರತಿ, ಪಾರ್ವತಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹಿರಿಯಣ್ಣ ಗೌಡ, ಕಾರ್ಯದರ್ಶಿ ಎ.ಎಲ್. ಲಿಂಗರಾಜು, ಮಾಜಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಮಂಜಣ್ಣ, ಹುಲಿಕೆರೆ ಸಂಪತ್ ಕುಮಾರ್ ಸೇರಿ ಸಂಘದ ಸದಸ್ಯರು ಹಾಗು ಗ್ರಾಮಸ್ಥರು ಹಾಜರಿದ್ದರು.

## ಗಾಂಧಿಜಿ–ಶಾಸ್ತ್ರಿ ಜಯಂತಿ ಆಚರಣೆ: ಸಿದ್ದತೆಗೆ ಸೂಚನೆ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರಪಿತ ಮಹಾತ್ಮ ಗಾಂಧಿಜಿ ಹಾಗೂ ಭಾರತದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನಾಚರಣೆಯನ್ನು ಅ.2 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆಗೆ ಕ್ರಮವಹಿಸುವಂತೆ ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಯಂತಿ ಕುರಿತು ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸುವ ಮೂಲಕ ದಿನಾಚರಣೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ತಿಳಿಸಿದರು.

ಮಹಾನಗರ ಪಾಲಿಕೆಯ ಆಯುಕ್ತರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಒಳಗೊಂಡಂತೆ ಅ.2 ರಂದು ಬೆಳಿಗ್ಗೆ 6ರಿಂದ 8 ಗಂಟೆಯವರೆಗೆ ಡೈರಿ ವೃತ್ತದಿಂದ ಎನ್.ಆರ್.ವೃತ್ತದವರೆಗೆ ಶ್ರಮದಾನ ಕಾರ್ಯಕ್ರಮ ಏರ್ಪಡಿಸುವಂತೆ ತಿಳಿಸಿದರು.




ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಗಾಂಧಿ ಜಯಂತಿ ಕಡ್ಡಾಯವಾಗಿ ಆಚರಣೆ ಮಾಡಬೇಕು. ನಂತರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ತಿಳಿಸಿದರು.

ಅಂದು ಜಿಲ್ಲೆಯಾದ್ಯಂತ ಕಸಾಯಿ ಖಾನೆಗಳು ತೆರೆಯದಂತೆ, ಪ್ರಾಣಿ ವಧೆ ಹಾಗೂ ಮದ್ಯ ಮಾರಾಟ ಮಾಡದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರುದ್ರಮುನಿ, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಗಂಗಾಧರ್, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಮೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಕುಮಾರ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ರೇಬೀಸ್ ಲಸಿಕಾ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ರೇಬೀಸ್ ಅಥವಾ ಹುಚ್ಚು ನಾಯಿ ರೋಗ ವೈರಾಣುವಿನಿಂದ ಬರುವ ಒಂದು ಮಾರಣಾಂತಿಕ ರೋಗವಾಗಿದ್ದು, ನಾಯಿ, ಬೆಕ್ಕು, ಇತರೆ ನಾಯಿ ಜಾತಿಗೆ ಸೇರಿದ ಪ್ರಾಣಿಗಳು ಹಾಗೂ ಜಾನುವಾರುಗಳಲ್ಲಿ ಮಾತ್ರವಲ್ಲದೆ ಮನುಷ್ಯರಲ್ಲೂ ಸಹಾ ರೇಬೀಸ್ ರೋಗವು ಕಂಡು ಬರುತ್ತದೆ.



ಮನುಷ್ಯರಲ್ಲಿ ರೇಬೀಸ್ ರೋಗವು ಪ್ರಮುಖವಾಗಿ ರೇಬೀಸ್ ಪೀಡಿತ ನಾಯಿ, ಬೆಕ್ಕುಗಳು ಕಚ್ಚುವುದರಿಂದ ಅಥವಾ ಪರಚುವುದರಿಂದ ಬರುತ್ತದೆ. ಒಮ್ಮೆ ರೋಗ ಬಂದರೆ, ಮನುಷ್ಯರಿಗಾಗಲೀ ಅಥವಾ ಪ್ರಾಣಿಗಳಿಗಾಗಲೀ ಯಾವುದೇ ಪರಿಣಾಮಕಾರಿ ಚಿಕಿತ್ಸೆ ಲಭ್ಯವಿರುವುದಿಲ್ಲ ಹಾಗೂ ಖಾಯಿಲೆಯು ಸಾವಿನಲ್ಲಿ ಅಂತ್ಯಗೊಳ್ಳುತ್ತದೆ. ಆದ್ದರಿಂದ ಲಸಿಕೆಯೊಂದೇ ರೇಬೀಸ್ ತಡೆಗಟ್ಟುವ ಏಕೈಕ ಮಾರ್ಗವಾಗಿದೆ. ನಾಯಿ, ಬೆಕ್ಕುಗಳಲ್ಲಿ ರೇಬೀಸ್ ರೋಗ ಬಾರದಂತೆ ಲಸಿಕೆ ಹಾಕಿಸಿ ಕೊಳ್ಳುವುದು ರೇಬೀಸ್ ತಡೆಗಟ್ಟುವಲ್ಲಿ ಪ್ರಮುಖ ಘಟ್ಟವಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ರೇಬೀಸ್ ರೋಗದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಸೆ.28 ರಂದು ವಿಶ್ವ ರೇಬೀಸ್ ದಿನಾಚರಣೆ ಆಚರಿಸಲಾಗುತ್ತದೆ. ಅದರಂತೆ ಈ ವರ್ಷವೂ ಸಹ ವಿಶ್ವ ರೇಬೀಸ್ ದಿನಾಚರಣೆಯನ್ನು ಸೆ.28 ರಂದು ಆಚರಿಸಲಾಗುತ್ತಿದ್ದು, ಜಿಲ್ಲೆಯಾದ್ಯಾಂತ ಇಂದಿನಿಂದ ಅ.27ರ ವರೆಗೆ ಒಂದು ತಿಂಗಳ ಕಾಲ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಉಚಿತ ರೇಬೀಸ್ ರೋಗದ ಲಸಿಕಾ ಕಾರ್ಯಕ್ರಮವನ್ನು ಜಿಲ್ಲೆಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ನಾಯಿಗಳ ಸಂಖ್ಯೆ ಹೆಚ್ಚು ಇರುವ ಗ್ರಾಮ, ಪಟ್ಟಣ, ನಗರಗಳಲ್ಲಿ ಉಚಿತ ಲಸಿಕಾ ಶಿಬಿರ ಗಳನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ. ಆದ್ದರಿಂದ ಸಾಕು ಪ್ರಾಣಿ ಮಾಲೀಕರು ತಮ್ಮ ನಾಯಿ ಮತ್ತು ಬೆಕ್ಕುಗಳಿಗೆ ರೇಬೀಸ್ ರೋಗದ ಲಸಿಕೆ ಹಾಕಿಸಿಕೊಂಡು ಮನುಷ್ಯರು ಹಾಗೂ ಪ್ರಾಣಿ ಗಳನ್ನು ಕಾಡುವ ಮಾರಣಾಂತಿಕ ಖಾಯಿಲೆಯಾದ ರೇಬೀಸ್ ರೋಗ ತಡೆಗಟ್ಟಲು ಸಹಕರಿಸಬೇಕೆಂದು ಸಾರ್ವಜನಿಕರಲ್ಲಿ ಕೋರಿದ್ದಾರೆ.

ವಿಶ್ವ ರೇಬೀಸ್ ದಿನಾಚಾರಣೆಯ ಘೋಷವಾಕ್ಯವು ಒಟ್ಟಾಗಿ ಬಲಿಷ್ಠರಾಗೋಣ ( r e S e r ) ಎಂದಿದ್ದು, ಅದರಂತೆ ಜನ ಸಮುದಾಯ, ಪಶುವೈದ್ಯರು ಹಾಗೂ ಸರ್ಕಾರದ ಒಟ್ಟಾಗಿ ಎಲ್ಲಾರೂ ಕೈ ಜೋಡಿಸಿ ರೇಬೀಸ್ ರೋಗ ತಡೆಗಟ್ಟಲು ಸಹಕರಿಸೋಣವೆಂದು ತಿಳಿಸಿದ್ದಾರೆ.

## ನಾಳೆಯಿಂದ ಬೇಲೂರಿನಲ್ಲಿ ಇಷ್ಟಲಿಂಗ ಮಹಾಪೂಜೆ



• ಪ್ರಜೋದಯ ವರದಿ

**ಹಾಸನ:** ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಮಹೋತ್ಸವ, ಇಷ್ಟಲಿಂಗ ಮಹಾಪೂಜೆ, ಧರ್ಮ ಜಾಗೃತಿ ಸಮಾವೇಶ, ಶಿವದೀಕ್ಷಾ, ವೀರಭದ್ರೇಶ್ವರ ಜಯಂತ್ಯೋತ್ಸವ ಹಾಗು ವಧು–ವರರ ನೋಂದಣಿ ಕಾರ್ಯಕ್ರಮವನ್ನು ಸೆ.30 ಮತ್ತು ಅ.1 ರಂದು ಬೇಲೂರಿನಲ್ಲಿ ಆಯೋಜಿಸಲಾಗಿದೆ ಎಂದು ಯಸಳೂರು ತೆಂಕಲಗೋಡು ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಸೆ.30ರ ಮಧ್ಯಾಹ್ನ 1 ಗಂಟೆಗೆ ಶ್ರೀಮದ್ ಉಜ್ಜಯಿಸಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಸಂಜೆ 6 ಗಂಟೆಗೆ ಧರ್ಮಜಾಗೃತಿ ಸಮಾವೇಶ ನಡೆಯಲಿದೆ ಎಂದರು.

ಅ.1 ರಂದು ಶ್ರೀಮದ್ ಉಜ್ಜಯಿನಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ಧರ್ಮ ಜಾಗೃತಿ ಸಂದೇಶ, ಶಿವದೀಕ್ಷೆ ಹಾಗು ಶ್ರೀ ವೀರಭದ್ರೇಶ್ವರ ಜಯಂತ್ಯೋತ್ಸವ ಸೇರಿ ಹಲವು ಕಾರ್ಯಕ್ರಮ ಆಯೋಜಿಸಲಾಗಿದೆ. ಎರಡು ದಿನಗಳ ಕಾರ್ಯಕ್ರಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಧಾರ್ಮಿಕ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ನುಗ್ಗೇಹಳ್ಳಿಯ ಪುರವರ್ಗ ಶ್ರೀ ಮಹೇಶ್ವರ ಸ್ವಾಮೀಜಿ ಮಾತನಾಡಿ, ಉದ್ಯಮಿ ಗ್ರಾನೈಟ್ ರಾಜಶೇಖರ್ ಅವರು ದಾಸೋಹ ವ್ಯವಸ್ಥೆ ಮಾಡಿದ್ದಾರೆ. ಶಾಸಕ ಹೆಚ್.ಕೆ.ಸುರೇಶ್ ಅವರು ವೇದಿಕೆ ಮತ್ತು ಪೆಂಡಾಲ್ ವ್ಯವಸ್ಥೆ ಮಾಡಿದ್ದಾರೆ. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರೂ ಸಹಕಾರ ನೀಡಿದ್ದಾರೆಂದರು. ಬೇಲೂರು ತಾಲ್ಲೂಕಿನ ವೀರಶೈವ ಲಿಂಗಾಯತ ಸಮುದಾಯ ಹಾಗು ಸಾರ್ವಜನಿಕರು ಆಗಮಿಸಬೇಕು. 2 ದಿನಗಳ ಕಾರ್ಯಕ್ರಮದಲ್ಲಿ ಸುಮಾರು 10 ಸಾವಿರ ಮಂದಿ ಭಾಗಿಯಾಗುವ ನಿರೀಕ್ಷೆ ಇದೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಸಮಾಜದ ನಾಗೇಶ್, ಅವಿನಾಶ್, ಜಿಲ್ಲಾ ಪುರೋಹಿತ ವರ್ಗದ ಅಧ್ಯಕ್ಷ ದೇವರಾಜಶಾಸ್ತ್ರಿ, ರೇಣುಕಾರಾಧ್ಯ ಹಾಜರಿದ್ದರು.

# ಗ್ರಾಮೀಣ ಭಾಗಕ್ಕೆ ರಸ್ತೆ, ಅಂಚೆ ಸೇವೆ ವಿಸ್ತರಣೆಗೆ ಕ್ರಮ

## ಪಿಎಂಜಿಎಸ್‌ವೈ, ಅಂಚೆ ಇಲಾಖೆ ಅಧಿಕಾರಿಗಳೊಂದಿಗೆ ಸಂಸದರ ಸಭೆ

• ಪ್ರಜೋದಯ ವರದಿ

**ಹಾಸನ:** ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಂಡಿರುವ ಹಾಗು ಪ್ರಗತಿಯಲ್ಲಿರುವ ವಿವಿಧ ರಸ್ತೆ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ಸಂಸದರ ಕಚೇರಿಯಲ್ಲಿ ಸೋಮವಾರ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಯಡಿ ನಡೆಯುತ್ತಿರುವ ರಸ್ತೆ ಕಾಮಗಾರಿಗಳ ಕುರಿತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ ಅವರು, ಕ್ಷೇತ್ರದ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಸಂಪರ್ಕ ಸುಧಾರಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕಾಮ ಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರಿಗೆ ಉತ್ತಮ ರಸ್ತೆ ಸಂಪರ್ಕ ಕಲ್ಪಿಸುವುದು, ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವುದು ಹಾಗು ನಿಗದಿತ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಕಾಮಗಾರಿಗಳ ಪ್ರಗತಿ ಮೇಲೆ ನಿರಂತರ ನಿಗಾ ವಹಿಸಬೇಕೆಂದು ತಿಳಿಸಿದರು.

ಗ್ರಾಮೀಣ ಜನತೆಗೆ ಉತ್ತಮ ರಸ್ತೆ ಸಂಪರ್ಕ ಹಾಗು ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ರಸ್ತೆ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ನಿರಂತರವಾಗಿ ಕಾರ್ಯನಿರ್ವಹಿಸಲಾಗುತ್ತಿದೆಂದು ತಿಳಿಸಿದರು.

**ಅಂಚೆ ಸೇವೆ ವಿಸ್ತರಣೆಗೆ ಕ್ರಮ**

ಬಳಿಕ ಅಂಚೆ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂಸದರು, ಜಿಲ್ಲೆಯ ವಿವಿಧ ಭಾಗಗಳಲ್ಲಿ ಅಂಚೆ ಸೇವೆಗಳ ಲಭ್ಯತೆ ಹಾಗೂ ವಿಸ್ತರಣೆಯ ಅಗತ್ಯದ ಕುರಿತು ಚರ್ಚಿಸಿ, ಜಿಲ್ಲೆಯ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿ ಅಂಚೆ ಸೇವೆಗಳ ವಿಸ್ತರಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೊಬೈಲ್ ಹಾಗು ಡಿಜಿಟಲ್ ತಂತ್ರಜ್ಞಾನದ ಯುಗದಲ್ಲಿಯೂ ಅಂಚೆ ಇಲಾಖೆಯ ಸೇವೆ ಗಳು ಜನಸಾಮಾನ್ಯರ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಅಂಚೆ ಕೇವಲ ಪತ್ರ ರವಾನಿಸುವ ವ್ಯವಸ್ಥೆಯಲ್ಲ. ಅದು ದೇಶದ ಜನರನ್ನು ಸಂಪರ್ಕಿಸುವ ವಿಶ್ವಾಸಾರ್ಹ ಸೇವಾ ವ್ಯವಸ್ಥೆ ಯಾಗಿದ್ದು, ಅದರ ಮಹತ್ವವನ್ನು ಮುಂದಿನ ಪೀಳಿಗೆಗೂ ಪರಿಚಯಿಸುವ ಅಗತ್ಯವಿದೆ ಎಂದು ತಿಳಿಸಿದರು.

ಜಿಲ್ಲೆಯ ಗ್ರಾಮೀಣ ಹಾಗು ದೂರದ ಪ್ರದೇಶಗಳಲ್ಲಿ ಎಲ್ಲಿ ಅಂಚೆ ಕಚೇರಿಗಳ ಅಗತ್ಯವಿದೆ ಎಂಬುದನ್ನು ಸಾಮಾಗ್ರವಾಗಿ ಗುರುತಿಸಬೇಕು. ಸಾರ್ವಜನಿಕರಿಗೆ ತಲುಪಬೇಕಾದ ಅಂಚೆ ಸೇವೆಗಳ ಕುರಿತು ಮಾಹಿತಿ ಸಂಗ್ರಹಿಸಿ, ಅಗತ್ಯವಿರುವ ಕಡೆಗಳಲ್ಲಿ ಹೊಸ ಅಂಚೆ ಕಚೇರಿಗಳನ್ನು ಆರಂಭಿಸುವುದು ಹಾಗೂ ಸೇವೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಅಂಚೆ ಇಲಾಖೆಯ ಸೇವಾ ಜಾಲವನ್ನು ಮತ್ತಷ್ಟು ಬಲಪಡಿಸುವ ಮೂಲಕ ಸರ್ಕಾರದ ವಿವಿಧ ಸೇವೆಗಳು ಹಾಗೂ ಸೌಲಭ್ಯಗಳನ್ನು ಜನರಿಗೆ ಸುಲಭವಾಗಿ, ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ತಲುಪಿಸಲು ಕ್ರಮ ಕೈಗೊಳ್ಳಬೇಕು. ಗ್ರಾಮೀಣ ಹಾಗೂ ದೂರದ ಪ್ರದೇಶಗಳ ಜನರಿಗೂ ಅಂಚೆ ಇಲಾಖೆಯ ಎಲ್ಲಾ ಅಗತ್ಯ ಸೇವೆಗಳು ಸುಲಭವಾಗಿ ಲಭ್ಯವಾಗುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

# ಬಡವರಿಗೆ ನಿವೇಶನ ನೀಡುವಂತೆ ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಕಲ್ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟೆಮನೆ ವೃತ್ತದಲ್ಲಿರುವ ಸರ್ಕಾರಿ ಜಮೀನನ್ನು ವಶಕ್ಕೆ ಪಡೆದು, ಮನೆ ನಿರ್ಮಿಸಿಕೊಂಡಿರುವ ಅರ್ಹ ಬಡವರಿಗೆ ಹಕ್ಕುಪತ್ರ ಹಾಗೂ ನಿವೇಶನ ರಹಿತರಿಗೆ ನಿವೇಶನ ನೀಡಬೇಕು ಉಳಿದ ಜಮೀನನ್ನು ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿಡಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸೋಮವಾರ ಕಲ್ಕೆರೆಯಿಂದ ಚನ್ನರಾಯಪಟ್ಟಣ ತಹಶೀಲ್ದಾರ್ ಕಚೇರಿವರೆಗೆ ಪಾದಯಾತ್ರೆ ನಡೆಸಿ ಪ್ರತಿಭಟಿಸಲಾಯಿತು.

ಕಟ್ಟೆಮನೆ ವೃತ್ತದಲ್ಲಿರುವ ಸರ್ಕಾರಿ ಜಮೀನು ಅತಿಕ್ರಮಣಕ್ಕೆ ಒಳಗಾಗುವ ಸಾಧ್ಯತೆಯಿದ್ದು, ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆತಿಲ್ಲ. ಸರ್ಕಾರಿ ಭೂಮಿ ಕೆಲವರ ಪಾಲಾಗದೆ, ಬಡವರು ಹಾಗೂ ಸಾರ್ವಜನಿಕರ ಅಗತ್ಯಗಳಿಗೆ ಬಳಸಬೇಕೆಂದು ಸಂಘದ ಜಿಲ್ಲಾಧ್ಯಕ್ಷ ಹೆಚ್.ಎಸ್. ಮಂಜುನಾಥ್ ಒತ್ತಾಯಿಸಿದರು.

ಸರ್ಕಾರಿ ಭೂಮಿಯಲ್ಲಿ ಹೆಚ್ಚುವರಿ ಜಮೀನು ಉಳುಮೆ ಮಾಡುತ್ತಿರುವವರ ಸಮೀಕ್ಷೆ ನಡೆಸಿ, ಹೆಚ್ಚುವರಿ ಭೂಮಿಯನ್ನು ವಶಕ್ಕೆ ಪಡೆದು ಭೂರಹಿತರಿಗೆ ಹಂಚಿಕೆ ಮಾಡಬೇಕು. ಮನೆ ಕಟ್ಟಿಕೊಂಡಿರುವ ಅರ್ಹರಿಗೆ ಹಕ್ಕುಪತ್ರ, ನಿವೇಶನ



ರಹಿತರಿಗೆ ನಿವೇಶನ, ಕೆರೆ ಒತ್ತುವರಿ ತೆರವು ಹಾಗೂ ಬಗರ್ ಹುಕುಂ ಸಾಗುವಳಿಗೆ ಅರ್ಜಿ ಸಲ್ಲಿಸಿರುವ ಅರ್ಹರಿಗೆ ಹಕ್ಕುಪತ್ರ ನೀಡಬೇಕು ಹಾಗೂ ಉಳಿದ ಜಾಗವನ್ನು ಆಸ್ಪತ್ರೆ, ಡಿಜಿಟಲ್ ಗ್ರಂಥಾಲಯ, ಡೈರಿ, ಸೊಸೈಟಿ, ಆಟದ ಮೈದಾನ ಮತ್ತು ಸಮುದಾಯ ಭವನ ಸೇರಿ ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿಡ ಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ನವೀನ್ ಆಗ್ರಹಿಸಿದರು.

ಬೇಡಿಕೆಗಳನ್ನು ಈಡೇರಿಸದಿದ್ದರೆ ತಹಶೀಲ್ದಾರ್ ಕಚೇರಿ ಎದುರು ಅನಿರ್ದಿಷ್ಟಾವಧಿ ಹೋರಾಟ ನಡೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ. ಆರ್.ಹರೀಶ್, ಕಲ್ಕೆರೆ ಗ್ರಾಮದ ಸರ್ವೆ ನಂ. 156/1ರಲ್ಲಿ 9.06 ಎಕರೆ ಸರ್ಕಾರಿ ಜಮೀನು ಇರುವುದಾಗಿ ಪಹಣಿಯಲ್ಲಿ ದಾಖಲಾಗಿದ್ದು, ಕಂದಾಯ ಇಲಾಖೆಯಿಂದ ಅಳತೆ ಕಾರ್ಯವೂ ನಡೆದಿದೆಂದು ತಿಳಿಸಿದರು.

ಈ ಜಾಗದಲ್ಲಿ ಸಾರ್ವಜನಿಕ ಗ್ರಂಥಾಲಯಕ್ಕೆ 10 ಗುಂಟೆ, ಆಟದ ಮೈದಾನಕ್ಕೆ 3 ಎಕರೆ ಹಾಗೂ ಸಮುದಾಯ ಭವನ ಸೇರಿ ಸಾರ್ವಜನಿಕ ಉದ್ದೇಶಗಳಿಗೆ 2 ಎಕರೆ ಮೀಸಲಿಡುವಂತೆ ಗ್ರಾಮ ಪಂಚಾಯಿತಿ ಮನವಿ ಸಲ್ಲಿಸಿದೆ. ಪಿಎಸಿಸಿ ಬ್ಯಾಂಕ್ ಹಾಗೂ ಡೈರಿ ಇರುವ ಹಿನ್ನಲೆಯಲ್ಲಿ ಅಗತ್ಯ ಕಟ್ಟಡಗಳಿಗೆ ಜಾಗ ಮೀಸಲಿಟ್ಟು, ಉಳಿದ ಜಾಗವನ್ನು ಆಶ್ರಯ ನಿವೇಶನಕ್ಕೆ ಬಳಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, 15 ದಿನಗಳೊಳಗೆ ಸರ್ಕಾರಿ ಜಮೀನು ವಶಕ್ಕೆ ಪಡೆದು ಒತ್ತುವರಿ ತೆರವುಗೊಳಿಸುವುದಾಗಿ ಭರವಸೆ ನೀಡಿದರು. ಭೂರಹಿತರಿಗೆ ಹಂಚಿಕೆ, ಅರ್ಹರಿಗೆ ಹಕ್ಕುಪತ್ರ, ನಿವೇಶನ ರಹಿತರಿಗೆ ನಿವೇಶನ ಹಾಗೂ ಬಗರ್ ಹುಕುಂ ಅರ್ಜಿಗಳನ್ನೂ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವುದಾಗಿ ತಿಳಿಸಿದರು.

ಅಧಿಕಾರಿಗಳ ಭರವಸೆ ಬಳಿಕ ಪ್ರತಿಭಟನೆಯನ್ನು ಹಿಂಪಡೆಯಲಾಯಿತು. ಸಂಘದ ತಾಲ್ಲೂಕು ಗೌರವಾಧ್ಯಕ್ಷ ಜೆ.ಎನ್.ಚಂದ್ರಹಾಸ, ಅಧ್ಯಕ್ಷ ತೇಜಸ್‌ಗೌಡ, ಕಾರ್ಯದರ್ಶಿ ವಾಸುದೇವ ಕಲ್ಕೆರೆ ಸೇರಿ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಗುಡ್ಡಗಾಡು ಭಾಗಕ್ಕೂ ನೆಟ್‌ವರ್ಕ್ ಸೇವೆ ಕಲ್ಪಿಸಿ

## ಮಲೆನಾಡು ಭಾಗದಲ್ಲಿ ಟವರ್‌ಗಳ ಸ್ಥಾಪನೆಗೆ ಸಂಸದ ಸೂಚನೆ

• ಪ್ರಜೋದಯ ವರದಿ



**ಹಾಸನ:** ಮಲೆನಾಡು ಭಾಗದ ಸಕಲೇಶಪುರ ತಾಲ್ಲೂಕಿನ ಗುಡ್ಡಗಾಡು ಹಾಗು ದೂರದ ಪ್ರದೇಶಗಳಲ್ಲಿರುವ ಗ್ರಾಮಗಳಿಗೆ ಉತ್ತಮ ದೂರಸಂಪರ್ಕ ಸೇವೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಬಿಎಸ್‌ಎನ್‌ಎಲ್ ಭವನದಲ್ಲಿ ಸೋಮವಾರ ನಡೆದ ದೂರವಾಣಿ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಕಲೇಶಪುರ ತಾಲ್ಲೂಕಿನ ಯಾವೆಲ್ಲಾ ಗ್ರಾಮಗಳು ಹಾಗು ಪ್ರದೇಶಗಳಲ್ಲಿ ಬಿಎಸ್‌ಎನ್ ಎಲ್ ಮೊಬೈಲ್ ಮತ್ತು ದೂರಸಂಪರ್ಕ ಸೇವೆಯ ಕೊರತೆ ಇದೆ ಎಂಬುದರ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿ, ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಮಲೆನಾಡಿನ ಗುಡ್ಡಗಾಡು ಪ್ರದೇಶಗಳಲ್ಲಿ ನೆಟ್‌ವರ್ಕ್ ಸಮಸ್ಯೆಯಿಂದ ಸಾರ್ವಜನಿಕರು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಬೇಕು. ಸಂಪರ್ಕ ಸೌಲಭ್ಯವಿಲ್ಲದ ಪ್ರದೇಶಗಳನ್ನು ಗುರುತಿಸಿ, ಅಗತ್ಯವಿರುವ ಕಡೆಗಳಲ್ಲಿ ಹೊಸ ಮೊಬೈಲ್ ಟವರ್‌ಗಳನ್ನು ಸ್ಥಾಪಿಸುವ ಮೂಲಕ ನಿರಂತರ ಸಂಪರ್ಕ ಸೇವೆ ಒದಗಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಇಂಟರ್‌ನೆಟ್ ಸೇವೆಯು ಇಂದು ಕೇವಲ ಸೌಲಭ್ಯವಾಗಿ ಉಳಿದಿಲ್ಲ. ಶಿಕ್ಷಣ, ಆರೋಗ್ಯ, ಉದ್ಯೋಗ, ವ್ಯಾಪಾರ, ಸರ್ಕಾರಿ ಸೇವೆಗಳು ಹಾಗು ತುರ್ತು ಸಂದರ್ಭಗಳಲ್ಲಿ ಜನರಿಗೆ ಅತ್ಯಗತ್ಯವಾದ ಸಾರ್ವಜನಿಕ ಸೇವೆಯಾಗಿದೆ. ಮಲೆನಾಡಿನ ಯಾವುದೇ ಗ್ರಾಮವೂ ಸಂಪರ್ಕದ ಕೊರತೆಯಿಂದ ಅಭಿವೃದ್ಧಿಯಲ್ಲಿ ಹಿಂದೆ ಬೀಳಬಾರದು ಎಂಬುದು ಆದ್ಯತೆಯಾಗಬೇಕೆಂದು ಹೇಳಿದರು.

ಸಕಲೇಶಪುರ ತಾಲ್ಲೂಕಿನ ಪ್ರತಿಯೊಂದು ಗ್ರಾಮಕ್ಕೂ ಉತ್ತಮ ಹಾಗು ನಿರಂತರ ದೂರಸಂಪರ್ಕ ಸೇವೆ ದೊರೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಸಮಗ್ರವಾಗಿ ಕಾರ್ಯನಿರ್ವಹಿಸಿ, ನೆಟ್‌ವರ್ಕ್ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂದು ತಿಳಿಸಿದರು. ಬಿಎಸ್‌ಎನ್‌ಎಲ್ ಅಧಿಕಾರಿಗಳು ಹಾಜರಿದ್ದರು.

# ಸರ್ಕಾರಿ ನೌಕರರ ಸೇವಾ ಪ್ರಶಸ್ತಿ: ನಾಮನಿರ್ದೇಶನಕ್ಕೆ ಆಹ್ವಾನ

• ಪ್ರಜೋದಯ ವರದಿ

**ಸಕಲೇಶಪುರ:** ಕರ್ತವ್ಯನಿಷ್ಠೆ, ಪ್ರಾಮಾಣಿಕತೆ, ದಕ್ಷತೆ ಹಾಗೂ ಜನಸೇವೆಯ ಮೂಲಕ ಗಮನಾರ್ಹ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಇದೇ ಪ್ರಥಮ ಬಾರಿಗೆ ಸರ್ಕಾರಿ ನೌಕರರ ಸೇವಾ ಪ್ರಶಸ್ತಿ-2026 ನೀಡಲು ನಾಮನಿರ್ದೇಶನ ಆಹ್ವಾನಿಸಲಾಗಿದೆ ಎಂದು ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ತಮ್ಮಣ್ಣಶೆಟ್ಟಿ ಅವರು ತಿಳಿಸಿದ್ದಾರೆ.

ರಾಜ್ಯಾಧ್ಯಕ್ಷ ಷಡಾಕ್ಷರಿ ಅವರ ನೇತೃತ್ವದಲ್ಲಿ ಪ್ರಶಸ್ತಿ ನೀಡಲು ನಾಮನಿರ್ದೇಶನ ಪ್ರಕ್ರಿಯೆ ಆರಂಭಿಸಲಾಗಿದ್ದು, ಸೇವೆಯಲ್ಲಿ ವಿಶೇಷ ಸಾಧನೆ ಮಾಡಿರುವ ನೌಕರರನ್ನು ಇಲಾಖೆಯ ಮುಖ್ಯಸ್ಥರು, ಮೇಲಾಧಿಕಾರಿಗಳು, ಸಹೋದ್ಯೋಗಿಗಳು, ಸಂಘ-ಸಂಸ್ಥೆಗಳು, ಸಾರ್ವಜನಿಕರು ಹಾಗೂ ಸಂಘದ ಜಿಲ್ಲಾ ಮತ್ತು ತಾಲ್ಲೂಕು ಶಾಖೆಗಳು ನಾಮನಿರ್ದೇಶನ ಮಾಡಬಹುದೆಂದು ತಿಳಿಸಿದ್ದಾರೆ.

ಖಾಯಂ ಗ್ರೂಪ್-ಎ, ಬಿ, ಸಿ ಅಥವಾ ಡಿ ದರ್ಜೆಯ ಸರ್ಕಾರಿ ನೌಕರರಾಗಿದ್ದು, ಕನಿಷ್ಠ ಐದು ವರ್ಷಗಳ ಸೇವೆ ಪೂರ್ಣಗೊಳಿಸಿರುವವರು ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ನಾಮನಿರ್ದೇಶನವನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಬೇಕು. ಅರ್ಜಿಯನ್ನು ಯುನಿಕೋಡ್ ತಂತ್ರಾಂಶದಲ್ಲಿ ಕನ್ನಡ ಭಾಷೆಯಲ್ಲಿ ಭರ್ತಿ ಮಾಡಬೇಕಿದ್ದು, ಇತ್ತೀಚಿನ ಭಾವಚಿತ್ರ, ವೇತನ ಚೀಟಿ, ಸೇವಾ ಸಾಧನೆಗಳ ವಿವರ, ಸಾಧನೆಗಳಿಗೆ ಪೂರಕ ದಾಖಲೆಗಳು, ಕೆಜಿಐಡಿ ಸಂಖ್ಯೆ ಸೇರಿ ಅಗತ್ಯ ಮಾಹಿತಿಯನ್ನು ಸಲ್ಲಿಸಬೇಕು.

ಮಾಹಿತಿಗಾಗಿ ಪವರ್ ಮೀಡಿಯಾ ಸಂಪರ್ಕಿಸಬಹುದೆಂದು ತಮ್ಮಣ್ಣಶೆಟ್ಟಿ ತಿಳಿಸಿದ್ದಾರೆ.

# ಭಗತ್ ಸಿಂಗ್ ರೀತಿ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ

• ಪ್ರಜೋದಯ ವರದಿ

**ಹಾಸನ:** ಭಗತ್ ಸಿಂಗ್ ಅವರನ್ನು ಕೇವಲ ದೇಶಭಕ್ತಿಯ ಸಂಕೇತವಾಗಿ ನೆನೆಯುವುದರಷ್ಟೇ ಸಾಲದು. ಅವರ ವಿಚಾರಗಳನ್ನು ತಿಳಿದುಕೊಂಡು, ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಪ್ರಶ್ನಿಸುವ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕೆಂದು ಎಐಡಿಎಸ್‌ಒ ಜಿಲ್ಲಾಧ್ಯಕ್ಷೆ ಚೈತ್ರ ತಿಳಿಸಿದರು.




ನಗರದ ಮಹಾರಾಜ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಕ್ರಾಂತಿಕಾರಿ ಶಹೀದ್ ಭಗತ್ ಸಿಂಗ್ ಅವರ 119ನೇ ಜನ್ಮದಿನಾಚರಣೆಯಲ್ಲಿ ಮಾತನಾಡಿದ ಅವರು, ಕೇವಲ 23ನೇ ವಯಸ್ಸಿನಲ್ಲಿ ನಗುನಗುತ್ತಾ ದೇಶಕ್ಕಾಗಿ ತನ್ನ ಪ್ರಾಣವನ್ನೇ ಅರ್ಪಿಸಿದ ಭಗತ್ ಸಿಂಗ್ ಅವರನ್ನು ನಾವೆಲ್ಲ ಸ್ಮರಿಸಬೇಕು ಎಂದರು.

ಭಗತ್ ಸಿಂಗ್ ಕೇವಲ ಬ್ರಿಟೀಷರ ವಿರುದ್ಧ ಹೋರಾಡಿದ ಕ್ರಾಂತಿಕಾರಿಯಾಗಿರಲಿಲ್ಲ. ಬ್ರಿಟೀಷರು ದೇಶವನ್ನು ತೊರೆದ ನಂತರ ದೇಶದ ಚುಕ್ಕಾಣಿ ಹಿಡಿಯುವವರು ಯಾರ ಪರವಾಗಿ ಕೆಲಸ ಮಾಡಬೇಕು, ಸಮಾಜ ಯಾವ ರೀತಿಯಲ್ಲಿ ರೂಪುಗೊಳ್ಳಬೇಕೆಂಬುದರ ಕುರಿತು ತಮ್ಮ ಬರಹಗಳು, ಪುಸ್ತಕಗಳು ಹಾಗು ವಿಚಾರಗಳ ಮೂಲಕ ಅವರು ಸ್ಪಷ್ಟವಾದ ಚಿಂತನೆಗಳನ್ನು ಮುಂದಿಟ್ಟಿದ್ದರು. ಶೋಷಣೆ, ಅಸಮಾನತೆ ಮತ್ತು ಅನ್ಯಾಯ ಮುಕ್ತವಾದ ಸಮಾಜದ ನಿರ್ಮಾಣದ ಅಗತ್ಯವನ್ನು ಅವರು ಪ್ರತಿಪಾದಿಸಿದ್ದರು ಎಂದು ಹೇಳಿದರು.

ಭಗತ್ ಸಿಂಗ್ ಪ್ರತಿಪಾದಿಸಿದ ವೈಚಾರಿಕತೆ, ವೈಜ್ಞಾನಿಕ ಮನೋಭಾವ, ಅನ್ಯಾಯದ ವಿರುದ್ಧ ಪ್ರಶ್ನಿಸುವ ಧೈರ್ಯ ಹಾಗು ಶೋಷಣೆ-ಅಸಮಾನತೆ ಮುಕ್ತ ಸಮಾಜದ ಕನಸನ್ನು ವಿದ್ಯಾರ್ಥಿ-ಯುವಜನರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಭಗತ್ ಸಿಂಗ್ ಕಂಡಂತಹ ಉಚಿತ ಮತ್ತು ಸಮಾನ ಶಿಕ್ಷಣ, ಎಲ್ಲರಿಗೂ ಕೈಗೆಟುಕುವ ಆರೋಗ್ಯ ಸೇವೆ, ದುಡಿಯುವ ಪ್ರತಿ ಯೊಬ್ಬರಿಗೂ ಉದ್ಯೋಗ ಹಾಗು ಸಮಾನತೆಯ ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ ವಿದ್ಯಾರ್ಥಿ-ಯುವಜನರು ಮತ್ತು ಸಾರ್ವಜನಿಕರು ಒಗ್ಗಟ್ಟಾಗಿ ಹೋರಾಟಕ್ಕೆ ಮುಂದಾಗಬೇಕೆಂದರು.

ಸ್ವಾತಂತ್ರ್ಯ ದೊರೆತು ಸುಮಾರು 8 ದಶಕಗಳು ಕಳೆದಿದ್ದರೂ ಇಂದಿಗೂ ಶಿಕ್ಷಣ ಸಾಮಾನ್ಯ ಜನರಿಗೆ ಸುಲಭವಾಗಿ ದೊರೆ ಯುವ ಹಕ್ಕಿನ ಬದಲು ವ್ಯಾಪಾರದ ಸರಕಾ ಗುತ್ತಿರುವುದು, ಆರೋಗ್ಯ ಕ್ಷೇತ್ರದಲ್ಲಿ ಖಾಸಗೀಕರಣ ಹೆಚ್ಚುತ್ತಿರುವುದು, ದುಡಿಯುವ ಕೈಗಳಿಗೆ ಸಮರ್ಪಕ ಉದ್ಯೋಗ ದೊರೆಯದಿರುವುದು ಗಂಭೀರ ಪ್ರಶ್ನೆಯಾಗಿದೆ. ರೈತರು ಮತ್ತು ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿಯಬೇಕಾದ ಪರಿಸ್ಥಿತಿ ಮುಂದುವರಿದಿದೆ. ಮತ್ತೊಂದೆಡೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಾಮಾನ್ಯ ಜನರ ಬದುಕಿನ ಮೇಲಿನ ಹೊರೆ ಹೆಚ್ಚುತ್ತಿದೆ. ವಿದ್ಯಾರ್ಥಿ-ಯುವಜನರು ಹಾಗು ರೈತರ ಆತ್ಮಹತ್ಯೆಗಳಂತಹ ಆತಂಕಕಾರಿ ಬೆಳವಣಿಗೆಗಳೂ ಸಮಾಜದ ಮುಂದಿರುವ ಗಂಭೀರ ಸಮಸ್ಯೆಗಳಾಗಿವೆ ಎಂದರು.

ಪ್ರತಿವರ್ಷ 1.2 ಕೋಟಿ ಪದವೀಧರರು ಭಾರತದ ಉದ್ಯೋಗ ಮಾರುಕಟ್ಟೆಗೆ ಕಾಲಿಡುತ್ತಾರೆ. ಸರ್ಕಾರಿ ಮತ್ತು ಖಾಸಗಿ ಕ್ಷೇತ್ರ ಎರಡನ್ನು ಸೇರಿಸಿದರು ಸರಾಸರಿ 16 ರಿಂದ 20 ಲಕ್ಷ ಉದ್ಯೋಗಗಳು ಮಾತ್ರ ಸೃಷ್ಟಿಯಾಗುತ್ತಿವೆ. ಉಳಿದ ಒಂದು ಕೋಟಿಗೂ ಹೆಚ್ಚು ಯುವಜನರು ಅರೆ ಉದ್ಯೋಗಿಗಳಾಗಿ ಅಥವಾ ನಿರುದ್ಯೋಗಿಗಳಾಗಿ ಉಳಿಯುತ್ತಿದ್ದಾರೆಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಒ ಕಾರ್ಯದರ್ಶಿ ಸುಷ್ಮಾ, ಉಪಾಧ್ಯಕ್ಷ ಅಭಿಷೇಕ್, ಪದಾಧಿಕಾರಿಗಳಾದ ಭಾನುಶ್ರೀ, ಸುಶ್ಮಿತಾ, ಶಿವು, ಚಿನ್ಮಯಿ, ಪೃಥ್ವಿರಾಜ್, ನಮ್ರತಾ ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕಾವೇರಿ ನೀರಾವರಿ ನಿಗಮ ನಿಯಮಿತದ ಹೇಮಾವತಿ ಬಲದಂಡೆ ನಾಲಾ ಉಪವಿಭಾಗ, ಹೊಳೆನರಸೀಪುರ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ ಸಹಯೋಗದಲ್ಲಿ ಸ್ವಯಂ ನಿರ್ವಹಣೆ ಅಡಿಯಲ್ಲಿ ಮಳಲಿ ವಿದ್ಯುತ್ ವಿತರಣಾ ಕೇಂದ್ರದಿಂದ ಮರ್ಕುಲಿ ಗ್ರಾಮದ ಏತ ನೀರಾವರಿ ಯೋಜನೆಯ 2ನೇ ಹಂತದ ಪಂಪ್ ಹೌಸ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ವಾಹಕ ಜೋಡಣೆ ಕಾಮಗಾರಿ ನಿರ್ವಹಿಸಲು ಮಳಲಿ, ಶಾಂತಿಗ್ರಾಮ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ 11 ಕೆ.ವಿ. ಪೂರಕಗಳ ಗ್ರಾಹಕರಿಗೆ ಸೆ.29 ರಂದು ಬೆಳಿಗ್ಗೆ 10.30 ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

# ಕಿತ್ತಾವರದಲ್ಲಿ ಗಣೇಶ ವಿಸರ್ಜನೆ ಸಂಪನ್ನ



• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಅನುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿತ್ತಾವರ ಗ್ರಾಮದಲ್ಲಿ ಎರಡು ವಾರಗಳ ಕಾಲ ಸಂಭ್ರಮದಿಂದ ನಡೆದ ಗಣೇಶೋತ್ಸವ ಸಂಪನ್ನಗೊಂಡಿತು.

ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗು ಮನೋರಂಜನಾ ಕಾರ್ಯ ಕ್ರಮಗಳೊಂದಿಗೆ ಗಣೇಶ ಮೂರ್ತಿ ವಿಸರ್ಜಿಸಲಾಯಿತು. ಗಣೇಶ ಮೂರ್ತಿ ಪ್ರತಿಷ್ಠಾಪನೆಯ ದಿನದಿಂದಲೇ ಪ್ರತಿ ದಿನ ಭಕ್ತಾದಿಗಳಿಗೆ ಅನ್ನದಾಸೋಹ ಏರ್ಪಡಿಸಲಾಗಿತ್ತು. ಅದರೊಂದಿಗೆ ಮಕ್ಕಳು, ಮಹಿಳೆಯರು ಹಾಗು ಪುರುಷರಿಗೆ ವಿವಿಧ ಮನೋರಂಜನಾತ್ಮಕ ಆಟೋಟ ಸ್ಪರ್ಧೆ ಆಯೋಜಿಸಲಾಗಿತ್ತು. ಗ್ರಾಮಸ್ಥರು ಹಾಗು ಸುತ್ತಲಿನ ಗ್ರಾಮಗಳ ಭಕ್ತರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ವಿಸರ್ಜನೆಯ ಹಿಂದಿನ ದಿನ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಬಳಿಕ ಮಕ್ಕಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಬೇಲೂರು ಕೃಷ್ಣಮೂರ್ತಿ ರಚಿಸಿರುವ ತ್ಯಾಗಿ ಸಾಮಾಜಿಕ ನಾಟಕ ಪ್ರದರ್ಶನಗೊಂಡಿತು.

ನಾಟಕದ ಹಾಸ್ಯಮಯ ಸನ್ನಿವೇಶಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರೆ, ಭಾವನಾತ್ಮಕ ದೃಶ್ಯಗಳು ಪ್ರೇಕ್ಷಕರ ಮನಸೂರೆಗೊಂಡವು. ಹಲವು ಸನ್ನಿವೇಶಗಳಲ್ಲಿ ಪ್ರೇಕ್ಷಕರು ಭಾವುಕರಾಗಿ ಕಣ್ಣೀರಿಟ್ಟರು. ನಾಟಕವು ಪ್ರೇಕ್ಷಕರಿಂದ ಮೆಚ್ಚುಗೆ ಪಡೆಯಿತು. ಬಳಿಕ ಅಲಂಕೃತ ವಾಹನದಲ್ಲಿ ಗಣೇಶ ಮೂರ್ತಿಯನ್ನು ಕೂರಿಸಿ ಭವ್ಯ ಮೆರವಣಿಗೆ ನಡೆಸಲಾಯಿತು. ದೋಲನಮನೆ ಹಾಗು ಕಿತ್ತಾವರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ಭಕ್ತರು ಸಂಭ್ರಮದಿಂದ ಪಾಲ್ಗೊಂಡರು. ಗಣಪತಿ ವಿಸರ್ಜನೆ ಹಿನ್ನಲೆ ಸಾಗಿದ ಮೆರವಣಿಗೆ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಿಸಿತು.

ನಂತರ ಜೈಭೀಮ್ ನಗರಕ್ಕೆ ತೆರಳುವ ಮಾರ್ಗದಲ್ಲಿರುವ ಕಲ್ಕೆರೆಯಲ್ಲಿ ಗಣೇಶ ಮೂರ್ತಿಯ ವಿಸರ್ಜನೆ ನೆರವೇರಿಸಲಾಯಿತು. ಗಣೇಶೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದ್ದು, ಗ್ರಾಮಸ್ಥರು, ಯುವಕರು ಹಾಗು ಭಕ್ತಾದಿಗಳ ಸಹಕಾರದಿಂದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು ಎಂದು ಗ್ರಾಮಸ್ಥ ನಾಗರಾಜು ಅವರು ತಿಳಿಸಿದರು. ಕಿತ್ತಾವರ, ದೋಲನಮನೆ, ಈಚಲ ಪುರ, ಹೆಗ್ಗಡಿಹಳ್ಳಿ ಹಾಗು ಜೈಭೀಮ್ ನಗರದ ಭಕ್ತಾದಿಗಳು ಸೇರಿ ಸುತ್ತ ಮುತ್ತಲಿನ ಗ್ರಾಮಸ್ಥರು ಗಣೇಶ ವಿಸರ್ಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ಅರಕಲಗೂಡು ಗೌರವಾನ್ವಿತ 1ನೇ ಅಧಿಕ
ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ
ನ್ಯಾಯಾಲಯದಲ್ಲಿ
ಸಿಆರ್.ಮಿಸ್. 774/2026
ಅರ್ಜಿದಾರರು :
1.ಧರ್ಮವತಿ ಕೋಂ ರಾಮ ಸುಮಾರು 35 ವರ್ಷ,
2. ತಿಮ್ಮಮ್ಮ ಕೋಂ ವೆಂಕಣ್ಣ
ಸುಮಾರು 80 ವರ್ಷ,
3.ಕೆಂಚಮ್ಮ ಕೋಂ ಲೇಟ್ ಸಣ್ಣೇಗೌಡ @ ಸಿದ್ದೇಗೌಡ @ ನಂಜೇಗೌಡ
ಸುಮಾರು 80 ವರ್ಷ,
4.ರಾಜಮ್ಮ ಕೋಂ ಲೇಟ್ ಸಿದ್ದೇಗೌಡ
ಸುಮಾರು 57 ವರ್ಷ
5. ಮೊಗಣ್ಣೇಗೌಡ ಬಿನ್ ಲೇಟ್ ವೆಂಕಣ್ಣ ,
ಸುಮಾರು 60 ವರ್ಷ
6.ರಾಜೇಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 59 ವರ್ಷ,
7.ಸ್ವಾಮಿಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 56ವರ್ಷ,
8.ರಾಮ ಬಿನ್ ಲೇಟ್ ವೆಂಕಣ್ಣ
ಸುಮಾರು 52 ವರ್ಷ,
ಎಲ್ಲರೂ ಬೆಳವಾಡಿ ಗ್ರಾಮ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು.
ವಿರುದ್ಧ
ರೆಸ್ಪಾಂಡೆಂಟರು: ತಹಶೀಲ್ದಾರ್‌ರವರು
ತಾಲ್ಲೂಕು ಕಚೇರಿ ಅರಕಲಗೂಡು.
ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ 1 ಮತ್ತು 4ನೇ ಅರ್ಜಿದಾರರುಗಳ ಗಂಡನ ಅಜ್ಜಿ, 2 ಮತ್ತು 3ನೇ ಅರ್ಜಿದಾರರುಗಳ ಗಂಡನ ಅತ್ತೆ, 5 ರಿಂದ 8ನೇ ಅರ್ಜಿದಾರರುಗಳ ಅಜ್ಜಿಯಾದ ಸಿದ್ದಮ್ಮ ಕೋಂ ಕರಿಗೌಡ @ಕರಿಯಯ್ಯ @ಕರಿಯರವರು ದಿನಾಂಕ:01-01-1983 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ಕೂನನಕೊಪ್ಪಲು ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಡೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ.30/10/2026 ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026ನೇ ವರ್ಷದ ಆಗಸ್ಟ್ ತಿಂಗಳಿನ 17ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 17-08-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿರವರ ನ್ಯಾಯಾಲಯ, ಅರಕಲಗೂಡು



ಅರಕಲಗೂಡು ಗೌರವಾನ್ವಿತ 1ನೇ ಅಧಿಕ
ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ
ನ್ಯಾಯಾಲಯದಲ್ಲಿ
ಸಿಆರ್.ಮಿಸ್. 775/2026
ಅರ್ಜಿದಾರರು :
1.ಧರ್ಮವತಿ ಕೋಂ ರಾಮ ಸುಮಾರು 35 ವರ್ಷ,
2. ತಿಮ್ಮಮ್ಮ ಕೋಂ ವೆಂಕಣ್ಣ
ಸುಮಾರು 80 ವರ್ಷ,
3.ಕೆಂಚಮ್ಮ ಕೋಂ ಲೇಟ್ ಸಣ್ಣೇಗೌಡ @ ಸಿದ್ದೇಗೌಡ @ ನಂಜೇಗೌಡ
ಸುಮಾರು 80 ವರ್ಷ,
4.ರಾಜಮ್ಮ ಕೋಂ ಲೇಟ್ ಸಿದ್ದೇಗೌಡ
ಸುಮಾರು 57 ವರ್ಷ
5. ಮೊಗಣ್ಣೇಗೌಡ ಬಿನ್ ಲೇಟ್ ವೆಂಕಣ್ಣ,
ಸುಮಾರು 60 ವರ್ಷ
6.ರಾಜೇಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 59 ವರ್ಷ,
7.ಸ್ವಾಮಿಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 56ವರ್ಷ,
8.ರಾಮ ಬಿನ್ ಲೇಟ್ ವೆಂಕಣ್ಣ
ಸುಮಾರು 52 ವರ್ಷ,
ಎಲ್ಲರೂ ಬೆಳವಾಡಿ ಗ್ರಾಮ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು.
ವಿರುದ್ಧ
ರೆಸ್ಪಾಂಡೆಂಟರು: ತಹಶೀಲ್ದಾರ್‌ರವರು
ತಾಲ್ಲೂಕು ಕಚೇರಿ ಅರಕಲಗೂಡು.
ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ 1 ಮತ್ತು 4ನೇ ಅರ್ಜಿದಾರರುಗಳ ಗಂಡನ ಚಿಕ್ಕತಾತ, 2 ಮತ್ತು 3ನೇ ಅರ್ಜಿದಾರರುಗಳ ಗಂಡನ ಚಿಕ್ಕಪ್ಪ, 5 ರಿಂದ 8ನೇ ಅರ್ಜಿದಾರರುಗಳ ಚಿಕ್ಕತಾತನಾದ ಕುಂಟಯ್ಯ ಬಿನ್ ಮರಿಸಿದ್ದೇಗೌಡ @ ಮರಿಸಿದ್ದಯ್ಯ @ ಮರಿಸಿದ್ದ ರವರು ಅವಿವಾಹಿತರಾಗಿದ್ದು ದಿನಾಂಕ:18-08-1986 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ಬೆಳವಾಡಿ ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 29/10/2026ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026ನೇ ವರ್ಷದ ಆಗಸ್ಟ್ ತಿಂಗಳಿನ 17ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 17-08-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿರವರ ನ್ಯಾಯಾಲಯ, ಅರಕಲಗೂಡು



ಅರಕಲಗೂಡು ಗೌರವಾನ್ವಿತ 1ನೇ ಅಧಿಕ
ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ
ನ್ಯಾಯಾಲಯದಲ್ಲಿ
ಸಿಆರ್.ಮಿಸ್. 776/2026
ಅರ್ಜಿದಾರರು :
1.ಧರ್ಮವತಿ ಕೋಂ ರಾಮ ಸುಮಾರು 35 ವರ್ಷ,
2. ತಿಮ್ಮಮ್ಮ ಕೋಂ ವೆಂಕಣ್ಣ
ಸುಮಾರು 80 ವರ್ಷ,
3.ಕೆಂಚಮ್ಮ ಕೋಂ ಲೇಟ್ ಸಣ್ಣೇಗೌಡ @ ಸಿದ್ದೇಗೌಡ @ ನಂಜೇಗೌಡ
ಸುಮಾರು 80 ವರ್ಷ,
4.ರಾಜಮ್ಮ ಕೋಂ ಲೇಟ್ ಸಿದ್ದೇಗೌಡ
ಸುಮಾರು 57 ವರ್ಷ
5. ಮೊಗಣ್ಣೇಗೌಡ ಬಿನ್ ಲೇಟ್ ವೆಂಕಣ್ಣ ,
ಸುಮಾರು 60 ವರ್ಷ
6.ರಾಜೇಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 59 ವರ್ಷ,
7.ಸ್ವಾಮಿಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 56ವರ್ಷ,
8.ರಾಮ ಬಿನ್ ಲೇಟ್ ವೆಂಕಣ್ಣ
ಸುಮಾರು 52 ವರ್ಷ,
ಎಲ್ಲರೂ ಬೆಳವಾಡಿ ಗ್ರಾಮ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು.
ವಿರುದ್ಧ
ರೆಸ್ಪಾಂಡೆಂಟರು: ತಹಶೀಲ್ದಾರ್‌ರವರು
ತಾಲ್ಲೂಕು ಕಚೇರಿ ಅರಕಲಗೂಡು.
ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ 1 ಮತ್ತು 4ನೇ ಅರ್ಜಿದಾರರುಗಳ ಗಂಡನ ತಾತ, 2 ಮತ್ತು 3ನೇ ಅರ್ಜಿದಾರರುಗಳ ಮಾವ, 5 ರಿಂದ 8ನೇ ಅರ್ಜಿದಾರರುಗಳ ತಾತನಾದ ಕರಿಗೌಡ @ ಕರಿಯಯ್ಯ @ಕರಿಯ ಬಿನ್ ಮರಿಸಿದ್ದೇಗೌಡ @ಮರಿಸಿದ್ದಯ್ಯ @ಮರಿಸಿದ್ದ ರವರು ದಿನಾಂಕ:-01-01-1979ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ಬೆಳವಾಡಿ ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಡೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 29/10/2026ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದಲ್ಲಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಆಗಸ್ಟ್ ತಿಂಗಳಿನ 17ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 17-08-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿರವರ ನ್ಯಾಯಾಲಯ, ಅರಕಲಗೂಡು



ಅರಕಲಗೂಡು ಗೌರವಾನ್ವಿತ 1ನೇ ಅಧಿಕ
ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ
ನ್ಯಾಯಾಲಯದಲ್ಲಿ
ಸಿಆರ್.ಮಿಸ್. 777/2026
ಅರ್ಜಿದಾರರು :
1.ಧರ್ಮವತಿ ಕೋಂ ರಾಮ ಸುಮಾರು 35 ವರ್ಷ,
2. ತಿಮ್ಮಮ್ಮ ಕೋಂ ವೆಂಕಣ್ಣ
ಸುಮಾರು 80 ವರ್ಷ,
3.ಕೆಂಚಮ್ಮ ಕೋಂ ಲೇಟ್ ಸಣ್ಣೇಗೌಡ @ ಸಿದ್ದೇಗೌಡ @ ನಂಜೇಗೌಡ
ಸುಮಾರು 80 ವರ್ಷ,
4.ರಾಜಮ್ಮ ಕೋಂ ಲೇಟ್ ಸಿದ್ದೇಗೌಡ
ಸುಮಾರು 57 ವರ್ಷ
5. ಮೊಗಣ್ಣೇಗೌಡ ಬಿನ್ ಲೇಟ್ ವೆಂಕಣ್ಣ ,
ಸುಮಾರು 60 ವರ್ಷ
6.ರಾಜೇಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 59 ವರ್ಷ,
7.ಸ್ವಾಮಿಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 56ವರ್ಷ,
8.ರಾಮ ಬಿನ್ ಲೇಟ್ ವೆಂಕಣ್ಣ
ಸುಮಾರು 52 ವರ್ಷ,
ಎಲ್ಲರೂ ಬೆಳವಾಡಿ ಗ್ರಾಮ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು.
ವಿರುದ್ಧ
ರೆಸ್ಪಾಂಡೆಂಟರು: ತಹಶೀಲ್ದಾರ್‌ರವರು
ತಾಲ್ಲೂಕು ಕಚೇರಿ ಅರಕಲಗೂಡು.
ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ 1 ಮತ್ತು 4ನೇ ಅರ್ಜಿದಾರರುಗಳ ಗಂಡನ ಚಿಕ್ಕತಾತ, 2 ಮತ್ತು 3ನೇ ಅರ್ಜಿದಾರರುಗಳ ಗಂಡನ ಚಿಕ್ಕ ತಾತ, 5 ರಿಂದ 8ನೇ ಅರ್ಜಿದಾರರುಗಳ ಚಿಕ್ಕ ತಾತನಾದ ರೇವಣಿಗೌಡ @ ರೇವಣಿ ಬಿನ್ ಮರಿಸಿದ್ದೇಗೌಡ @ ಮರಿಸಿದ್ದಯ್ಯ @ ಮರಿಸಿದ್ದರವರು ದಿನಾಂಕ:23-02-1992 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ಕೂನನಕೊಪ್ಪಲು ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಡೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 29/10/2026ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದಲ್ಲಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026ನೇ ವರ್ಷದ ಆಗಸ್ಟ್ ತಿಂಗಳಿನ 17ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 17-08-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿರವರ ನ್ಯಾಯಾಲಯ, ಅರಕಲಗೂಡು



ಅರಕಲಗೂಡು ಗೌರವಾನ್ವಿತ 1ನೇ ಅಧಿಕ
ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ
ನ್ಯಾಯಾಲಯದಲ್ಲಿ
ಸಿಆರ್.ಮಿಸ್. 778/2026
ಅರ್ಜಿದಾರರು :
1.ಧರ್ಮವತಿ ಕೋಂ ರಾಮ ಸುಮಾರು 35 ವರ್ಷ,
2. ತಿಮ್ಮಮ್ಮ ಕೋಂ ವೆಂಕಣ್ಣ
ಸುಮಾರು 80 ವರ್ಷ,
3.ಕೆಂಚಮ್ಮ ಕೋಂ ಲೇಟ್ ಸಣ್ಣೇಗೌಡ @ ಸಿದ್ದೇಗೌಡ @ ನಂಜೇಗೌಡ
ಸುಮಾರು 80 ವರ್ಷ,
4.ರಾಜಮ್ಮ ಕೋಂ ಲೇಟ್ ಸಿದ್ದೇಗೌಡ
ಸುಮಾರು 57 ವರ್ಷ
5. ಮೊಗಣ್ಣೇಗೌಡ ಬಿನ್ ಲೇಟ್ ವೆಂಕಣ್ಣ ,
ಸುಮಾರು 60 ವರ್ಷ
6.ರಾಜೇಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 59 ವರ್ಷ,
7.ಸ್ವಾಮಿಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 56ವರ್ಷ,
8.ರಾಮ ಬಿನ್ ಲೇಟ್ ವೆಂಕಣ್ಣ
ಸುಮಾರು 52 ವರ್ಷ,
ಎಲ್ಲರೂ ಬೆಳವಾಡಿ ಗ್ರಾಮ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು.
ವಿರುದ್ಧ
ರೆಸ್ಪಾಂಡೆಂಟರು: ತಹಶೀಲ್ದಾರ್‌ರವರು
ತಾಲ್ಲೂಕು ಕಚೇರಿ ಅರಕಲಗೂಡು.
ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ 1 ಮತ್ತು 4ನೇ ಅರ್ಜಿದಾರರುಗಳ ಗಂಡನ ಮುತ್ತಾತ, 2 ಮತ್ತು 3ನೇ ಅರ್ಜಿದಾರರುಗಳ ಗಂಡನ ತಾತ, 5 ರಿಂದ 8ನೇ ಅರ್ಜಿದಾರರುಗಳ ಮುತ್ತಾತನಾದ ಮರಿಸಿದ್ದೇಗೌಡ @ ಮರಿಸಿದ್ದಯ್ಯ @ ಮರಿಸಿದ್ದ ಬಿನ್ ಲೇಟ್ ಕರಿಗೌಡ @ ಕರಿಯಯ್ಯ @ ಕರಿಯರವರು ದಿನಾಂಕ:10-04-1980 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ಕೂನನಕೊಪ್ಪಲು ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದಲ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 28/10/2026 ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಆಗಸ್ಟ್ ತಿಂಗಳಿನ 17 ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 17-08-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರ್ ಅರಕಲಗೂಡು ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿರವರ ನ್ಯಾಯಾಲಯ ಅರಕಲಗೂಡು



ಅರಕಲಗೂಡು ಗೌರವಾನ್ವಿತ 1ನೇ ಅಧಿಕ
ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ
ನ್ಯಾಯಾಲಯದಲ್ಲಿ
ಸಿಆರ್.ಮಿಸ್. 779/2026
ಅರ್ಜಿದಾರರು :
1.ಧರ್ಮವತಿ ಕೋಂ ರಾಮ ಸುಮಾರು 35 ವರ್ಷ,
2. ತಿಮ್ಮಮ್ಮ ಕೋಂ ವೆಂಕಣ್ಣ
ಸುಮಾರು 80 ವರ್ಷ,
3.ಕೆಂಚಮ್ಮ ಕೋಂ ಲೇಟ್ ಸಣ್ಣೇಗೌಡ @ ಸಿದ್ದೇಗೌಡ @ ನಂಜೇಗೌಡ
ಸುಮಾರು 80 ವರ್ಷ,
4.ರಾಜಮ್ಮ ಕೋಂ ಲೇಟ್ ಸಿದ್ದೇಗೌಡ
ಸುಮಾರು 57 ವರ್ಷ
5. ಮೊಗಣ್ಣೇಗೌಡ ಬಿನ್ ಲೇಟ್ ವೆಂಕಣ್ಣ ,
ಸುಮಾರು 60 ವರ್ಷ
6.ರಾಜೇಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 59 ವರ್ಷ,
7.ಸ್ವಾಮಿಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 56ವರ್ಷ,
8.ರಾಮ ಬಿನ್ ಲೇಟ್ ವೆಂಕಣ್ಣ
ಸುಮಾರು 52 ವರ್ಷ,
ಎಲ್ಲರೂ ಬೆಳವಾಡಿ ಗ್ರಾಮ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು.
ವಿರುದ್ಧ
ರೆಸ್ಪಾಂಡೆಂಟರು: ತಹಶೀಲ್ದಾರ್‌ರವರು
ತಾಲ್ಲೂಕು ಕಚೇರಿ ಅರಕಲಗೂಡು.
ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ 1 ಮತ್ತು 4ನೇ ಅರ್ಜಿದಾರರುಗಳ ಗಂಡನ ಮುತ್ತಜ್ಜಿ, 2 ಮತ್ತು 3ನೇ ಅರ್ಜಿದಾರರುಗಳ ಗಂಡನ ಅಜ್ಜಿ, 5 ರಿಂದ 8ನೇ ಅರ್ಜಿದಾರರುಗಳ ಮುತ್ತಜ್ಜಿಯಾದ ಪುಟ್ಟಮ್ಮ ಕೋಂ ಲೇಟ್ ಮರಿಸಿದ್ದೇಗೌಡ @ ಮರಿಸಿದ್ದಯ್ಯ @ ಮರಿಸಿದ್ದ ರವರು ದಿನಾಂಕ:-07-09-1993 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳ, ಬೆಳವಾಡಿ ಗ್ರಾಮದಲ್ಲನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 28/10/2026 ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದಲ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026ನೇ ವರ್ಷದ ಆಗಸ್ಟ್ ತಿಂಗಳನ 17 ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 17-08-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿರವರ ನ್ಯಾಯಾಲಯ, ಅರಕಲಗೂಡು



ಅರಕಲಗೂಡು ಗೌರವಾನ್ವಿತ 1ನೇ ಅಧಿಕ
ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ
ನ್ಯಾಯಾಲಯದಲ್ಲಿ
ಸಿಆರ್.ಮಿಸ್. 780/2026
ಅರ್ಜಿದಾರರು :
1.ಧರ್ಮವತಿ ಕೋಂ ರಾಮ ಸುಮಾರು 35 ವರ್ಷ,
2. ತಿಮ್ಮಮ್ಮ ಕೋಂ ವೆಂಕಣ್ಣ
ಸುಮಾರು 80 ವರ್ಷ,
3.ಕೆಂಚಮ್ಮ ಕೋಂ ಲೇಟ್ ಸಣ್ಣೇಗೌಡ @ ಸಿದ್ದೇಗೌಡ @ ನಂಜೇಗೌಡ
ಸುಮಾರು 80 ವರ್ಷ,
4.ರಾಜಮ್ಮ ಕೋಂ ಲೇಟ್ ಸಿದ್ದೇಗೌಡ
ಸುಮಾರು 57 ವರ್ಷ
5. ಮೊಗಣ್ಣೇಗೌಡ ಬಿನ್ ಲೇಟ್ ವೆಂಕಣ್ಣ ,
ಸುಮಾರು 60 ವರ್ಷ
6.ರಾಜೇಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 59 ವರ್ಷ,
7.ಸ್ವಾಮಿಗೌಡ ಬಿನ್ ಲೇಟ್ ವೆಂಕಣ್ಣ
ಸುಮಾರು 56ವರ್ಷ,
8.ರಾಮ ಬಿನ್ ಲೇಟ್ ವೆಂಕಣ್ಣ
ಸುಮಾರು 52 ವರ್ಷ,
ಎಲ್ಲರೂ ಬೆಳವಾಡಿ ಗ್ರಾಮ, ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು.
ವಿರುದ್ಧ
ರೆಸ್ಪಾಂಡೆಂಟರು: ತಹಶೀಲ್ದಾರ್‌ರವರು
ತಾಲ್ಲೂಕು ಕಚೇರಿ ಅರಕಲಗೂಡು.
ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ 1 ಮತ್ತು 4ನೇ ಅರ್ಜಿದಾರರುಗಳ ಗಂಡನ ಚಿಕ್ಕಅಜ್ಜಿ, 2 ಮತ್ತು 3ನೇ ಅರ್ಜಿದಾರರುಗಳ ಗಂಡನ ಚಿಕ್ಕ ಅಜ್ಜಿ, 5 ರಿಂದ 8ನೇ ಅರ್ಜಿದಾರರುಗಳ ಚಿಕ್ಕ ಅಜ್ಜಿಯಾದ ಚಿಕ್ಕಮ್ಮ ಕೋಂ ರೇವಣಗೌಡ @ ರೇವಣಿ ರವರು ಅವಿವಾಹಿತರಾಗಿದ್ದು ದಿನಾಂಕ:-25-09-1995 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ಕೂನನಕೊಪ್ಪಲು ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕತಿಸ 28/10/2026ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026ನೇ ವರ್ಷದ ಆಗಸ್ಟ್ ತಿಂಗಳಿನ 17ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ವಕೀಲರು, ಅರಕಲಗೂಡು ದಿನಾಂಕ: 17-08-2026
ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಜೆಡ್ಜ್ & ಜೆ.ಎಂ.ಎಫ್.ಸಿರವರ ನ್ಯಾಯಾಲಯ, ಅರಕಲಗೂಡು

# ಹಾಸನ-ಬೇಲೂರು ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ

## ಎನ್‌ಹೆಚ್-373 ಕಾಮಗಾರಿ ಪ್ರಗತಿ ಪರಿಶೀಲನಾ ಸಭೆ: ಶ್ರೇಯಸ್ ಪಟೇಲ್ ಸೂಚನೆ

• ಪ್ರಜೋದಯ ವರದಿ

**ಹಾಸನ:** ಹಾಸನ-ಬೇಲೂರು ರಾಷ್ಟ್ರೀಯ ಹೆದ್ದಾರಿ ಎನ್‌ಹೆಚ್-373ರ ಕಾಮಗಾರಿಯನ್ನು ಗುಣಮಟ್ಟದೊಂದಿಗೆ ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಪ್ರಗತಿ ಕುರಿತು ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ, ಕಾಮಗಾರಿಯ ಪ್ರಸ್ತುತ ಸ್ಥಿತಿ, ಪೂರ್ಣಗೊಳ್ಳಬೇಕಿರುವ ಕಾಮಗಾರಿಗಳು, ಸಾರ್ವಜನಿಕರಿಗೆ ಎದುರಾಗುತ್ತಿರುವ ಸಮಸ್ಯೆಗಳು ಹಾಗೂ ಕಾಮಗಾರಿ ಪೂರ್ಣಗೊಳಿಸಲು ಇರುವ ಅಡಚಣೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.

ಹಾಸನ-ಬೇಲೂರು ಮಾರ್ಗವು ಜಿಲ್ಲೆಯ ಪ್ರಮುಖ ಸಂಪರ್ಕ ರಸ್ತೆಯಾಗಿದ್ದು, ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಕಾಮಗಾರಿ ವಿಳಂಬದಿಂದ ಸಾರ್ವಜನಿಕರು ಹಾಗೂ ವಾಹನ ಸವಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಕಾಮಗಾರಿಯಲ್ಲಿರುವ ಅಡಚಣೆಗಳನ್ನು ತ್ವರಿತವಾಗಿ ನಿವಾರಿಸಬೇಕು. ರಸ್ತೆ ನಿರ್ಮಾಣದ ವೇಳೆ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಕಾಮಗಾರಿಯನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವ ಜೊತೆಗೆ ಸಾರ್ವಜನಿಕರ ಸುರಕ್ಷತೆ ಹಾಗು ಸುಗಮ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ರಸ್ತೆ ಕಾಮಗಾರಿ ನಡೆಯುತ್ತಿರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಅನಗತ್ಯ ತೊಂದರೆ ಉಂಟಾಗದಂತೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು. ಸಂಚಾರಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸುವ ಜೊತೆಗೆ ಕಾಮಗಾರಿಯ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಸಮಸ್ಯೆಗಳಿದ್ದಲ್ಲಿ ತಕ್ಷಣ ಪರಿಹರಿಸ ಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರಾಷ್ಟ್ರೀಯ ಹೆದ್ದಾರಿ-373 ಜನರ ಸುಗಮ ಸಂಚಾರ, ರಸ್ತೆ ಸುರಕ್ಷತೆ ಹಾಗು ಜಿಲ್ಲೆಯ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವದ ಸಂಪರ್ಕ ಮಾರ್ಗವಾಗಿದೆ. ಹೀಗಾಗಿ ಸಾರ್ವಜನಿಕ ಹಿತ ದೃಷ್ಟಿಯಿಂದ ಕಾಮಗಾರಿಯ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ತಹಶೀಲ್ದಾರ್‌ಗಳಾದ ಗೀತಾ, ಸುಪ್ರಿತಾ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಜರಿದ್ದರು.



### ಎನ್‌ಹೆಚ್‌ಎ ಅಧಿಕಾರಿಗಳೊಂದಿಗೆ ಚರ್ಚೆ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ಹಾಗು ಸಂಬಂಧಿಸಿದ ಅಧಿಕಾರಿಗಳೊಂದಿಗೆ ರಸ್ತೆ ಕಾಮಗಾರಿಗಳ ಕುರಿತು ನಡೆದ ಪರಿಶೀಲನಾ ಸಭೆಯಲ್ಲಿ ಹಾಸನ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ವಿವಿಧ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪ್ರಗತಿ, ಕಾಮಗಾರಿಗಳ ಗುಣಮಟ್ಟ ಹಾಗು ಸಾರ್ವಜನಿಕರಿಗೆ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.

ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಯಾವುದೇ ರೀತಿಯ ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು. ಬಾಕಿ ಉಳಿದಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಜತೆಗೆ, ನಿರ್ಮಾಣ ಕಾಮಗಾರಿಗಳ ಗುಣಮಟ್ಟವನ್ನು ನಿರಂತರವಾಗಿ ಪರಿಶೀಲಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

# ರಮೇಶ್ ಅವರ ಅಗಲಿಕೆಯಿಂದ ಅಪಾರ ನಷ್ಟ

• ಪ್ರಜೋದಯ ವರದಿ



**ಹಾಸನ:** ಯೋಗ ಶಿಕ್ಷಕ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಹೆಚ್.ಬಿ.ರಮೇಶ್ ಅವರ ಅಗಲಿಕೆ ತುಂಬಲಾರದ ನಷ್ಟವುಂಟು ಮಾಡಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ. ಆರ್.ಕೆಂಚೇಗೌಡ ಅವರು ಸಂತಾಪ ವ್ಯಕ್ತಪಡಿಸಿದರು.

ಹೆಚ್.ಬಿ.ರಮೇಶ್ ಅವರ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಕೈಲಾಶ್ ಶಂಕರ್, ನಾಗರತ್ನ, ರಂಗನಾಥ್, ನಿರಂಜನ ಅವರು ದೈಹಿಕ ಶಿಕ್ಷಕರಾಗಿದ್ದ ಅವಧಿಯಲ್ಲಿ ಮುನ್ಸಿಪಲ್ ಶಾಲೆಯಲ್ಲಿ ರಮೇಶ್ ಅವರು ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದರು. ಆಗಿನ ಕಾಲದಲ್ಲಿ ಶಾಲೆಗಳಲ್ಲಿ ಕ್ರೀಡೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತಿತ್ತು. ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾಗಿ ಮಹಾರಾಜ ಪಾರ್ಕ್‌ನಲ್ಲಿ ವಿವೇಕಾನಂದ ಪ್ರತಿಮೆ ಹಾಗು ಯೋಗ ಶಾಲೆ ತೆರೆದರು. ಯಾವಾಗಲೂ ಪುಸ್ತಕಗಳನ್ನು ಜೊತೆಗೆ ತೆಗೆದುಕೊಂಡು ಇರುತ್ತಿದ್ದರು. ನೇರ ನುಡಿ, ಸರಳತೆ ಮೂಲಕ ಮೆಚ್ಚುಗೆ ಗಳಿಸಿದ್ದರೆಂದರು.

ಕ.ಸಾ.ಪ. ಮಾಜಿ ಜಿಲ್ಲಾಧ್ಯಕ್ಷ ಉದಯರವಿ ಅವರು ಮಾತನಾಡಿ, ಮಹಾರಾಜ ಪಾರ್ಕ್‌ನಲ್ಲಿ ಯೋಗ ಕೇಂದ್ರ ತೆರೆಯಲು ಸಾಕಷ್ಟು ಶ್ರಮ ವಹಿಸಿದ್ದಾರೆ. ಅವರ ಶಿಷ್ಯಂದಿರು ಅನೇಕ ಜನರು ಯೋಗ ಕಲಿತಿದ್ದಾರೆ. ರಮೇಶ್ ಅವರ ಅಗಲಿಕೆ ದುಃಖ ತರಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿ ಒಳ್ಳೆಯ ಕೆಲಸ ಮಾಡಿದ್ದಾರೆಂದರು.

ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಬಿ.ಆರ್.ಉದಯಕುಮಾರ್ ಅವರು ಮಾತನಾಡಿ, ಕಾಯಕದಲ್ಲಿ ವೃತ್ತಿ ಪರತೆಯನ್ನು ಮೆರೆದಿದ್ದವರು ಹೆಚ್.ಬಿ.ರಮೇಶ್. ಅವರು ತುಂಬಾ ಸರಳ ಜೀವನ ನಡೆಸಿದರು. ಮಾತನಾಡಲು ಮುಜುಗರಪಡುತ್ತಿರಲಿಲ್ಲ. ಯೋಗದಲ್ಲಿ ಅವರು ಇತರರಿಗೆ ಮಾದರಿಯಾಗಿದ್ದರೆಂದರು.

ಪತ್ರಕರ್ತ ತೌಫಿಕ್ ಅವರು ಮಾತನಾಡಿ, ರಮೇಶ್ ಅವರು ಹಾಸ್ಯ ಮನೋಭಾವದವರಾಗಿದ್ದರು. ಸಾಕಷ್ಟು ಪುಸ್ತಕಗಳನ್ನು ಬರೆದಿದ್ದಾರೆ. ಸಾಹಿತ್ಯಕ್ಕೆ ಬೆಲೆ ಕಟ್ಟಲು ಆಗುವುದಿಲ್ಲ ಎಂದು ಪ್ರತಿಪಾದಿಸಿದ ಅವರು ತಮ್ಮ ಯಾವ ಪುಸ್ತಕಗಳಿಗೂ ಬೆಲೆ ನಿಗದಿ ಮಾಡಿರಲಿಲ್ಲ. ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದರು ಎಂದರು.

ಕೆಯೂಡಬ್ಲ್ಯೂಜೆ ಉಪಾಧ್ಯಕ್ಷ ಹೆಚ್. ಬಿ.ಮದನಗೌಡ, ಸಂಘದ ಉಪಾಧ್ಯಕ್ಷರಾದ ಎನ್. ನಂಜುಂಡೇಗೌಡ, ಜಿ.ಪ್ರಕಾಶ್, ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿಗಳಾದ ಬಿ.ಆರ್. ಬೊಮ್ಮೇಗೌಡ, ಕೆ.ಎಂ.ಹರೀಶ್, ಖುಷ್ವಂತ್, ಖಜಾಂಚಿ ಪ್ರಕಾಶ್ ಬೆಳವಾಡಿ ಇದ್ದರು.

# ಬೆಳೆ ಸಮೀಕ್ಷೆ ಪೂರ್ಣಗೊಳಿಸಲು ರೈತರಿಗೆ ಸಹಕರಿಸಿ

## ಸಹಾಯಕ ಕೃಷಿ ನಿರ್ದೇಶಕ ಯು.ಎಂ. ಪ್ರಕಾಶ್ ಕುಮಾರ್ ಮನವಿ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಲ್ಲಿ 2026-27ನೇ ಸಾಲಿನ ಬೆಳೆ ಸಮೀಕ್ಷೆ ಕಾರ್ಯವನ್ನು ಸಮರ್ಪಕವಾಗಿ ಹಾಗು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಕೃಷಿಕ ಸಮಾಜದ ನಿರ್ದೇಶಕರು, ಕಾಫಿ ಬೆಳೆಗಾರರ ಸಂಘದ ಸದಸ್ಯರು ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ರೈತರಿಗೆ ಅಗತ್ಯ ಸಹಕಾರ ನೀಡಬೇಕೆಂದು ಸಹಾಯಕ ಕೃಷಿ ನಿರ್ದೇಶಕ ಯು.ಎಂ.ಪ್ರಕಾಶ್ ಕುಮಾರ್ ಅವರು ಮನವಿ ಮಾಡಿದ್ದಾರೆ.



ಇತ್ತೀಚೆಗೆ ನಡೆದ ಬೆಳೆ ಸಮೀಕ್ಷೆ ಸಭೆಯಲ್ಲಿ ಕೃಷಿಕ ಸಮಾಜದ ನಿರ್ದೇಶಕರು ಹಾಗು ಕಾಫಿ ಬೆಳೆಗಾರರ ಸಂಘದ ಸದಸ್ಯರು ಗ್ರಾಮ ಮಟ್ಟದಲ್ಲಿ ಬೆಳೆ ಸಮೀಕ್ಷೆ ಕಾರ್ಯಕ್ಕೆ ಸಹಕಾರ ನೀಡುವ ಕುರಿತು ಚರ್ಚಿಸಲಾಯಿತು. ಅದರಂತೆ ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ಬಾಕಿ ಉಳಿಸಿಕೊಂಡಿರುವ ರೈತರನ್ನು ಗುರುತಿಸಿ, ಬೆಳೆ ಸಮೀಕ್ಷೆದಾರರೊಂದಿಗೆ ಸಂಪರ್ಕ ಕಲ್ಪಿಸುವ ಮೂಲಕ ಸಮೀಕ್ಷೆ ಕಾರ್ಯ ಪೂರ್ಣಗೊಳ್ಳಲು ಸಹಕರಿಸಬೇಕೆಂದು ಕೋರಿದ್ದಾರೆ.

ನೈಸರ್ಗಿಕ ಕೃಷಿ ಅಭಿಯಾನ ಹಾಗು ಇತರೆ ಕೃಷಿ ತರಬೇತಿ ಕಾರ್ಯಕ್ರಮಗಳನ್ನು ಗ್ರಾಮ ಮಟ್ಟದಲ್ಲಿ ಆಯೋಜಿಸುವ ಸಂದರ್ಭದಲ್ಲಿ, ತರಬೇತಿಯ ಭಾಗವಾಗಿಯೇ ರೈತರಿಗೆ ಬೆಳೆ ಸಮೀಕ್ಷೆಯ ಮಹತ್ವ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಬಹುದು. ಈ ಅವಕಾಶವನ್ನು ಕೃಷಿಕ ಸಮಾಜದ ನಿರ್ದೇಶಕರು ಮತ್ತು ಕಾಫಿ ಬೆಳೆಗಾರರ ಸಂಘದ ಪದಾಧಿಕಾರಿಗಳು ಕೃಷಿ ಇಲಾಖೆ ಅಧಿಕಾರಿಗಳ ಸಮನ್ವಯದೊಂದಿಗೆ ಸದುಪಯೋಗಪಡಿಸಿ ಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ರೈತರೇ ಸ್ವತಃ ಬೆಳೆ ಸಮೀಕ್ಷೆ ಮಾಡಿಕೊಳ್ಳಲು ಸರ್ಕಾರ ಅವಕಾಶ ಕಲ್ಪಿಸಿದೆ. ಹೀಗಾಗಿ ಅದನ್ನು ಕೇವಲ ಇಲಾಖೆಯ ಕಾರ್ಯವೆಂದು ಪರಿಗಣಿಸದೆ, ರೈತರ ಬೆಳೆ ವಿವರಗಳು ನಿಖರವಾಗಿ ದಾಖಲಾಗುವಂತೆ ಎಲ್ಲರೂ ಸಹಕರಿಸಬೇಕು. ಬೆಳೆ ಸಮೀಕ್ಷೆಯ ನಿಖರ ಮಾಹಿತಿ ಮುಂದಿನ ದಿನಗಳಲ್ಲಿ ರೈತರಿಗೆ ದೊರೆಯುವ ವಿವಿಧ ಯೋಜನೆಗಳ ಅನುಷ್ಠಾನಕ್ಕೂ ಸಹಕಾರಿಯಾಗಲಿದೆ. ಆದ್ದರಿಂದ ಕೃಷಿಕ ಸಮಾಜದ ನಿರ್ದೇಶಕರು, ಕಾಫಿ ಬೆಳೆಗಾರರ ಸಂಘದ ಪದಾಧಿಕಾರಿಗಳು, ವಿದ್ಯಾವಂತ ಯುವಕರು ಹಾಗೂ ರೈತರು ಕೃಷಿ ಇಲಾಖೆಯೊಂದಿಗೆ ಕೈಜೋಡಿಸಿ ಬೆಳೆ ಸಮೀಕ್ಷೆ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.

# ಹಾಸನ-ಬೇಲೂರು ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ

» ಮೊದಲನೇ ಪುಟದಿಂದ

ಅಡಚಣೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.

ಹಾಸನ-ಬೇಲೂರು ಮಾರ್ಗವು ಜಿಲ್ಲೆಯ ಪ್ರಮುಖ ಸಂಪರ್ಕ ರಸ್ತೆಯಾಗಿದ್ದು, ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಕಾಮಗಾರಿ ವಿಳಂಬದಿಂದ ಸಾರ್ವಜನಿಕರು ಹಾಗೂ ವಾಹನ ಸವಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಕಾಮಗಾರಿಯಲ್ಲಿರುವ ಅಡಚಣೆಗಳನ್ನು ತ್ವರಿತವಾಗಿ ನಿವಾರಿಸಬೇಕು. ರಸ್ತೆ ನಿರ್ಮಾಣದ ವೇಳೆ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಕಾಮ ಗಾರಿಯನ್ನು ನಿಗದಿತ ಕಾಲಮಿತಿ ಯೊಳಗೆ ಪೂರ್ಣಗೊಳಿಸುವ ಜೊತೆಗೆ ಸಾರ್ವಜನಿಕರ ಸುರಕ್ಷತೆ ಹಾಗು ಸುಗಮ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ರಸ್ತೆ ಕಾಮಗಾರಿ ನಡೆಯುತ್ತಿರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಅನಗತ್ಯ ತೊಂದರೆ ಉಂಟಾಗದಂತೆ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕು. ಸಂಚಾರಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸುವ ಜೊತೆಗೆ ಕಾಮ ಗಾರಿಯ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಿ, ಸಮಸ್ಯೆಗಳಿದ್ದಲ್ಲಿ ತಕ್ಷಣವೇ ಪರಿಹರಿಸಬೇಕೆಂದು ಅಧಿ ಕಾರಿಗಳಿಗೆ ನಿರ್ದೇಶನ ನೀಡಿದರು.

ರಾಷ್ಟ್ರೀಯ ಹೆದ್ದಾರಿ-373 ಜನರ ಸುಗಮ ಸಂಚಾರ, ರಸ್ತೆ ಸುರಕ್ಷತೆ ಹಾಗು ಜಿಲ್ಲೆಯ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವದ ಸಂಪರ್ಕ ಮಾರ್ಗವಾಗಿದೆ. ಹೀಗಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಯ ಪ್ರಗತಿ ಯನ್ನು ನಿರಂತರ ವಾಗಿ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ತಹಶೀಲ್ದಾರ್‌ಗಳಾದ ಗೀತಾ, ಸುಪ್ರಿತಾ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಜರಿದ್ದರು.

# ನೀರಾವರಿ ಯೋಜನೆಗಳಿಗೆ ಮಧ್ಯಸ್ಥಿಕೆ ವಹಿಸಿ

» ಮೊದಲನೇ ಪುಟದಿಂದ

**ಘೋಷಿಸಿರುವ ಅನುದಾನ ಒದಗಿಸಿ**

ಜಲಶಕ್ತಿ ಸಚಿವಾಲಯದ ಸಲಹಾ ಸಮಿತಿ ಸಭೆಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ 21,167.93 ಕೋ.ರೂ. ವೆಚ್ಚದ ಪರಿಷ್ಕೃತ ಅಂದಾಜು ವೆಚ್ಚದ ಪ್ರಸ್ತಾಪ ವನ್ನು ಪರಿಶೀಲನೆ ಮಾಡಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ಪಿಎಂಕೆಎಸ್‌ವೈ ಅಡಿಯಲ್ಲಿ ಸೇರಿಸಲು 16 ನೇ ಹಣಕಾಸು ಆಯೋಗಕ್ಕೆ ಶಿಫಾರಸ್ಸು ಮಾಡಬೇಕು. ಜೊತೆಗೆ 2023-24 ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ ಅನುದಾನವನ್ನು ಆದಷ್ಟು ಬೇಗ ಒದಗಿಸಲು ಮಧ್ಯಸ್ಥಿಕೆ ವಹಿಸಿ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

**ಜಲ ಮೂಲಸೌಕರ್ಯ ಬಲಪಡಿಸಿ**

ರಾಜ್ಯ ಸರ್ಕಾರ ಪಿಎಂಕೆಎಸ್‌ವೈ ಮತ್ತು ಪ್ರವಾಹ ನಿರ್ವಹಣೆ ಹಾಗು ಗಡಿ ಪ್ರದೇಶಗಳ ಯೋಜನೆ ಅಡಿಯಲ್ಲಿ ನೀರಾವರಿ ಅಭಿವೃದ್ಧಿ, ಆಧುನೀಕರಣ, ಪ್ರವಾಹ ತಡೆ ಮತ್ತು ಸಂಬಂಧಿತ ಜಲ ನಿರ್ವಹಣೆ ಒಳಗೊಂಡ ವಿವಿಧ ಯೋಜನೆಗಳ ಪ್ರಸ್ತಾವನೆಗಳನ್ನು ಸಲ್ಲಿಸಿದೆ. ರಾಜ್ಯದಲ್ಲಿ ನೀರಾವರಿ ದಕ್ಷತೆ ಸುಧಾರಿಸಿ, ನೀರಾವರಿ ಸಾಮರ್ಥ್ಯ ಹೆಚ್ಚಿಸಲು, ಪ್ರವಾಹ ಬಾಧಿತ ಪ್ರದೇಶಗಳನ್ನು ರಕ್ಷಿಸಲು ಮತ್ತು ರಾಜ್ಯದಲ್ಲಿ ಜಲ ಮೂಲಸೌಕರ್ಯವನ್ನು ಬಲಪಡಿಸಲು ಈ ಪ್ರಸ್ತಾವನೆಗಳು ಪ್ರಮುಖವಾಗಿವೆ. ಈ ಪ್ರಸ್ತಾವನೆಗಳಿಗೆ ಪರಿಶೀಲನೆ ಮಾಡಿ ಅಗತ್ಯ ಅನುಮತಿ ನೀಡುವಂತೆ ಕೇಂದ್ರ ಜಲ ಆಯೋಗದ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಬೇಕೆಂದು ತಿಳಿಸಿದರು.

# ಕ.ಸಾ.ಪ. ಶ್ರದ್ಧಾಂಜಲಿ



» ಮೊದಲನೇ ಪುಟದಿಂದ

ಹೆಸರು ಮಾಡಿದ್ದರೋ ಅಷ್ಟೇ ಬರಹಗಾರರಾಗಿಯೂ ಗುರುತಿಸಿಕೊಂಡಿದ್ದರು. ಶಿಸ್ತಿನ ಸಿಪಾಯಿ ಹಾಗು ಸರಳ ಜೀವನ ನಡೆಸಿದರು. ನುಡಿದಂತೆ ನಡೆದ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆಂದರು.

ಪರಿಷತ್ತಿನ ಪರವಾಗಿ ಜಿಲ್ಲಾ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಅವರು ಮಾತನಾಡಿ, ಹೆಚ್.ಬಿ.ರಮೇಶ್ ಅವರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿ, ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು, ಮಾಜಿ ಅಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ, ಹುಡಾ ಮಾಜಿ ಅಧ್ಯಕ್ಷ ಮಂಜುನಾಥ್ ಮತ್ತಿತರರು ಮಾತನಾಡಿದರು.

ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಆಯುಕ್ತ ವೈ.ಎಸ್.ವೀರಭದ್ರಪ್ಪ, ಕಸಾಪ ಮಾಜಿ ಅಧ್ಯಕ್ಷ ಮದನಗೌಡ, ಉದಯರವಿ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಸಾಹಿತಿ ಎನ್.ಎಲ್.ಚನ್ನೇಗೌಡ, ಕಸಾಪ ಸಂಘಟನಾ ಕಾರ್ಯದರ್ಶಿ ಆರ್.ಬಿ. ಶಂಕರ್, ಚಂದ್ರಶೇಖರ್, ತಾಲ್ಲೂಕು ಅಧ್ಯಕ್ಷ ಮಮತೇಶ್, ಜಿಲ್ಲಾ ಪದಾಧಿಕಾರಿ ಬಿ.ಎಸ್.ವನಜಾ ಮತ್ತಿತರರಿದ್ದರು.

# ಬೆಳವಾಡಿ ಗ್ರಾ.ಪಂ. ಪಿಡಿಓ ವಿರುದ್ಧ ಲಂಚ ಸ್ವೀಕಾರ ಆರೋಪ

## ಸಾಲ ಪಡೆದಿದ್ದೆ ಎಂದ ಅಧಿಕಾರಿ ಸಂತೋಷ್ | ವಿಡಿಯೋ ವೈರಲ್

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ಶಾಲೆ ಅಭಿವೃದ್ಧಿ ಕಾಮಗಾರಿಗೆ ಕ್ರಿಯಾ ಯೋಜನೆ ತಯಾರಿಸಲು ಎಸ್‌ಡಿಎಂಸಿ ಹಿಂದಿನ ಅಧ್ಯಕ್ಷರಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ 30 ಸಾವಿರ ರೂ. ಲಂಚ ಸ್ವೀಕರಿಸಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ.

ಅರಕಲಗೂಡು ತಾಲ್ಲೂಕು ಬೆಳವಾಡಿ ಗ್ರಾಮ ಪಂಚಾಯಿತಿ ಪಿಡಿಓ ಸಂತೋಷ್ ವಿರುದ್ಧ ದೊಳ್ಳೇನಹಳ್ಳಿ ಗ್ರಾಮದ ದೊರೇಶ್ ಎಂಬುವವರು ಗಂಭೀರ ಆರೋಪ ಮಾಡಿದ್ದಾರೆ. ಇದೇ ಪ್ರಕರಣದಲ್ಲಿ ಇಂಜಿನಿಯರ್ ಪವಿತ್ರ ಎಂಬುವವರು 10 ಸಾವಿರ ರೂ. ಪಡೆದಿರುವ ವಿಡಿಯೋ ಹರಿದಾಡುತ್ತಿದೆ.

ಗ್ರಾಮದ ಸರ್ಕಾರಿ ಶಾಲೆ ಮೂಲ ಸೌಕರ್ಯಗಳಿಂದ ಬಳಲುತ್ತಿದ್ದು, ಕಾಮಗಾರಿ ಕೈಗೊಳ್ಳಬೇಕೆಂದು ಅಧಿಕಾರಿಗೆ ಮನವಿ ಮಾಡಿದ್ದೆ. ಆಗ ಅವರು ಈಗಲೇ ಕ್ರಿಯಾ ಯೋಜನೆ ತಯಾರಿಸಬೇಕೆಂದರೆ 2 ಲ.ರೂ. ವೆಚ್ಚದ ಕಾಮಗಾರಿಗೆ 30 ಸಾವಿರ ರೂ. ನೀಡಬೇಕೆಂದಿದ್ದರು. ನಾನು ಆಗಲೇ 24 ಸಾವಿರ ರೂ. ಫೋನ್ ಪೇ (2025ರ ಫೆ. 23ರಂದು) ಮಾಡಿದ್ದೆ, ಉಳಿದ 6 ಸಾವಿರ ರೂ.ಗಳನ್ನು ಡಿಪಿಆರ್ ತಯಾರಾದ ಬಳಿಕ ನೀಡಿದ್ದೇನೆ. ಆದರೆ ಸರ್ಕಾರಿ ಶಾಲೆಗೆ ಅನುದಾನ ಬಂದಿಲ್ಲವೆಂದು ದೊರೇಶ್ ಆರೋಪಿಸಿದ್ದಾರೆ.





ಈ ಕುರಿತು ಹಲವು ದಿನಗಳ ಹಿಂದೆಯೇ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಮನವಿ ಸಲ್ಲಿಸಿದ್ದೇನೆ. ಆದರೆ ಅಧಿಕಾರಿ ವಿರುದ್ಧ ಕ್ರಮ ಜರುಗಿಸಿಲ್ಲವೆಂದು ಅವರು ದೂರಿದ್ದಾರೆ.

**ಸಾಲ ಪಡೆದಿದ್ದೆ ಲಂಚವಲ್ಲ**

ದೊರೇಶ್ ಅವರಿಂದ 24 ಸಾವಿರ ರೂ. ಲಂಚ ಪಡೆದಿದ್ದೇನೆ ಹೊರತು ಲಂಚವಲ್ಲವೆಂದು ಪಿಡಿಓ ಸಂತೋಷ್ ಅವರು ಸಮಜಾಯಿಷಿ ನೀಡಿದ್ದಾರೆ. ದೊರೇಶ್ ಅವರು ನನಗೆ ಆತ್ಮೀಯರಾಗಿದ್ದರು. ಕಾನೂನು ಪ್ರಕಾರ ಕೆಲಸ ಮಾಡಿ ಕೊಂಡಿರಿ ಎಂದು ಯಾವಾಗಲೂ ಪ್ರೋತ್ಸಾಹಿಸುತ್ತಿದ್ದರು. ಕಳೆದ ವರ್ಷ ನಾನು ಅನಾರೋಗ್ಯದಿಂದ ಬಳಲುತ್ತಿದ್ದಾಗ ವೈದ್ಯಕೀಯ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇತ್ತು. ಹಾಗಾಗಿ ಅವರ ಬಳಿ ಸಾಲ ಕೇಳಿದ್ದೆ. ವರ್ಷದ ಬಳಿಕ ಫೋನ್ ಪೇ ಮಾಡಿದ ಸ್ಕ್ರೀನ್ ಶಾರ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ನನ್ನ ವಿರುದ್ಧ ಹಗೆತನ ಸಾಧಿಸುತ್ತಿದ್ದಾರೆ.

ಪಂಚಾಯಿತಿ ಅಧಿಕಾರಿಯಾಗಿ ಕಾನೂನು ಪ್ರಕಾರ ಕೆಲಸ ಮಾಡುತ್ತಿದ್ದೇನೆ. ತೆರಿಗೆ ಹಣವನ್ನು ಕಚೇರಿಯಲ್ಲಿ ಲೆಕ್ಕ ಹಾಕುತ್ತಿರುವುದನ್ನೇ ಲಂಚದ ಹಣವೆಂದು ಸುಳ್ಳು ಹೇಳಿದ್ದಾರೆ. ನನ್ನನ್ನು ಮಾನಸಿಕವಾಗಿ ಕುಗ್ಗಿಸುವ ಪ್ರಯತ್ನ ನಡೆದಿದೆ. ಈ ಎಲ್ಲಾ ಆರೋಪಗಳಿಂದ ಕಾನೂನು ಮೂಲಕವೇ ಮುಕ್ತನಾಗುತ್ತೇನೆಂದು ಪತ್ರಿಕೆಗೆ ಪ್ರತಿಕ್ರಿಯಿಸಿದರು.

# 5 ದಿನ ಭಾರೀ ಮಳೆ ಮುನ್ಸೂಚನೆ

» ಮೊದಲನೇ ಪುಟದಿಂದ

ಸೆ.30ರ ಬುಧವಾರ ಬಳ್ಳಾರಿ, ಚಾಮರಾಜನಗರ, ಮಂಡ್ಯ, ಮೈಸೂರು ಮತ್ತು ತುಮಕೂರು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳ ಗುಡುಗು ಸಹಿತ ಭಾರೀ ಮಳೆಯಾಗಬಹುದು. ಬೆಂಗಳೂರು (ಗ್ರಾಮೀಣ), ಬೆಂಗಳೂರು (ನಗರ), ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಬೆಂಗಳೂರು ದಕ್ಷಿಣ, ಶಿವಮೊಗ್ಗಾ ಮತ್ತು ವಿಜಯನಗರ ಜಿಲ್ಲೆಯಲ್ಲಿ ಗುಡುಗು ಸಹಿತ ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಜೋರಾದ ಗಾಳಿ (30-40ಕಿಮೀ)ಯೂ ಬೀಸಲಿದೆ.

ಅ.1ರ ಗುರುವಾರ ಬೆಂಗಳೂರು (ಗ್ರಾಮೀಣ), ಬೆಂಗಳೂರು (ನಗರ), ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮೈಸೂರು ಮತ್ತು ಶಿವಮೊಗ್ಗಾ ಜಿಲ್ಲೆಯಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದೆ. ಬಳ್ಳಾರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಮಂಡ್ಯ, ರಾಮನಗರ, ತುಮಕೂರು ಮತ್ತು ವಿಜಯನಗರ ಜಿಲ್ಲೆಯ ಕೆಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗಬಹುದು. ಅ.2ರ ಶುಕ್ರವಾರ ಮೈಸೂರು, ಶಿವಮೊಗ್ಗಾ ಜಿಲ್ಲೆಗಳು. ಚಿಕ್ಕಮಗಳೂರು, ಹಾಸನ, ಕೊಡಗಿನ ಒಂದೆರಡು ಕಡೆ ಭಾರೀ ಮಳೆಯಾಗುವ ಸಾಧ್ಯತೆ ಇದೆ.

# ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ಹೇಮಾವತಿ ನಾಲಾ ವ್ಯಾಪ್ತಿಯ ಕೆರೆ-ಕಟ್ಟೆಗಳನ್ನು ತುಂಬಿಸಬೇಕು, ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಹಾಗು ಮೇವು ಒದಗಿಸಬೇಕು. ಬರಗಾಲದ ಸಂದರ್ಭದಲ್ಲಿ ಗುಳೆ ಹೋಗುತ್ತಿರುವ ಕೃಷಿಕರು ಮತ್ತು ಕೃಷಿ ಕಾರ್ಮಿಕರಿಗೆ ಸ್ಥಳೀಯವಾಗಿ ಉದ್ಯೋಗ ಕಲ್ಪಿಸಬೇಕು. ಹಾಲಿಗೆ ಲೀಟರ್‌ಗೆ ಕನಿಷ್ಟ 60 ರೂ. ದರ ನಿಗದಿಪಡಿಸಿ, ಪಶು ಆಹಾರವನ್ನು ರಿಯಾಯಿತಿ ದರದಲ್ಲಿ ನೀಡಬೇಕೆಂದು ಆಗ್ರಹಿಸಿದರು.

ಹೇಮಾವತಿ, ಎತ್ತಿನಹೊಳೆ, ರೈಲ್ವೆ ಸೇರಿ ವಿವಿಧ ಯೋಜನೆಗಳಿಗೆ ಭೂಮಿ ಕಳೆದುಕೊಂಡ ರೈತರಿಗೆ ಬಾಕಿ ಪರಿಹಾರವನ್ನು ತುರ್ತಾಗಿ ಪಾವತಿಸಬೇಕು. ಬಗರ್ ಹುಕುಂ ಸಮಿತಿಯ ಮುಂದೆ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಿ ಮಂಜೂರಾದ ಜಮೀನುಗಳಿಗೆ ಖಾತೆ ಮಾಡಿಕೊಡಬೇಕು. ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ವಿದ್ಯುತ್ ಪರಿವರ್ತಕ ಅಳವಡಿಸಲು ಸೆಸ್ಕಾಂ ಅಧಿಕಾರಿಗಳು ಲಂಚ ಕೇಳುತ್ತಾರೆ. ಹಣ ಕೊಡದಿದ್ದರೆ ಸಂಪರ್ಕ ಕಲ್ಪಿಸುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು. ರೈತ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಲ್.ಹರೀಶ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಕಾಮಾಕ್ಷಿ, ಕಾರ್ಯದರ್ಶಿ ಮಂಜುಳಾ, ಪ್ರಧಾನ ಕಾರ್ಯದರ್ಶಿ ನರಸಿಂಹಶೆಟ್ಟಿ, ಉಪಾಧ್ಯಕ್ಷ ಯತೀಂದ್ರ, ಟಿ.ಎಂ. ಮೂಡ್ಲಗಿರಿಗೌಡ, ತಾಲೂಕು ಅಧ್ಯಕ್ಷ ಯು.ಎಲ್.ಶಾಂತರಾಜು ಅರಸು, ಶ್ರೀಧರ್ ಹಾಗು ರೈತರು ಭಾಗವಹಿಸಿದ್ದರು.


ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ.

ಕ್ರಮ ಸಂಖ್ಯೆ/ಕೃಉಮಾಸ/ಅರಸೀ/652/2026-27 ದಿನಾಂಕ:28/09/2026

ಟೆಂಡರ್ ಪ್ರಕಟಣೆ

ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹಬ್ಬನಘಟ್ಟ ಕಾವಲ್ (ಗೀಜಿಹಳ್ಳಿ) ಉಪ ಮಾರುಕಟ್ಟೆ ಪ್ರಾಂಗಣದ 36 ಸಂಖ್ಯೆ ಅಂಗಡಿ ಮಳಿಗೆಗಳನ್ನು ನಿಯಮ 13 ರ ಮೇರೆಗೆ ಹಾಗೂ ಒಂದು ಕ್ಯಾಂಟೀನ್ ಕಟ್ಟಡ ಮತ್ತು ಶೌಚಾಲಯವನ್ನು ನಿಯಮ 14 ರ ಮೇರೆಗೆ ಟೆಂಡರ್-ಕಂ-ಬಹಿರಂಗ ಹರಾಜಿನ ಮೂಲಕ ಲೀವ್ ಅಂಡ್ ಲೈಸೆನ್ಸ್ ಶುಲ್ಕದಆಧಾರದ ಮೇಲೆ ಗರಿಷ್ಟ 55 ತಿಂಗಳ ಅವಧಿಗೆ, 11 ತಿಂಗಳಿಗೊಮ್ಮೆ ನವೀಕರಿಸುವ 33 ತಿಂಗಳಿಗೊಮ್ಮೆ ಪ್ರತಿಶತ ಶೇ. 5% ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ) ನಿಯಮಾವಳಿ 2004 ರನ್ವಯ ಹಂಚಿಕೆ ಮಾಡಲು ಉದ್ದೇಶಿದ್ದು, ಸಮಿತಿಯು ನಿಗಧಿಪಡಿಸಿದ ನಮೂನೆಯಲ್ಲಿ ಪೇಟೆ ಕಾರ್ಯಕರ್ತರಿಂದ ಹಾಗೂ ಸಾರ್ವಜನಿಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ವಿವರ | ಕಟ್ಟಡಗಳ ಒಟ್ಟು ಸಂಖ್ಯೆ | ಮಾಹೆಯಾನ ಲೀವ್‌ಅಂಡ್ ಲೈಸೆನ್ಸ್ ಶುಲ್ಕ (ರೂ.ಗಳಲ್ಲಿ) | ಟೆಂಡರ್ ಫಾರಂ ಶುಲ್ಕ (ರೂ.ಗಳಲ್ಲಿ)ಜಿ.ಎಸ್.ಟಿ. ಪ್ರತ್ಯೇಕ | ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) | ಹಂಚಿಕೆ ವಿಧಾನ |
|---|---|---|---|---|---|---|
| 1 | 2 | 3 | 4 | 5 | 6 | 7 |
| | ನಿಯಮ 13 ರ ಮೇರೆಗೆ | | | | | |
| 1 | ಮಳಿಗೆ ಸಂಖ್ಯೆ 2 ರಿಂದ 38 ರವರೆಗೆ 2.3.4.5.6.7.8.9.10.11.13.15.17.25.27.28.29.30.31. 32.33.34,35.36.37.38 ಮೀಸಲಾತಿ: ಪರಿಶಿಷ್ಟ ಜಾತಿ:-12.14.16.22.23.24 ಪರಿಶಿಷ್ಟ ಪಂಗಡ:-19.21 ರೈತಉತ್ಪಾದಕರ ಸಂಘ:-18.26 | 36 | 3,300/- | 1,000/- | 6,600/- | ಲೈಸೆನ್ಸ್ ಪಡೆದ ಪೇಟೆ ಕಾರ್ಯಕರ್ತರಿಗೆ ಜೇಷ್ಟತೆ ಆಧಾರದ ಮೇಲೆ |
| | ಮಳಿಗೆ ಸಂಖ್ಯೆ-20 ನಿಯಮ 13 ರನ್ವಯ ಟೆಂಡರ್ ಕಂ-ಬಹಿರಂಗ-ಹರಾಜು | 01 | 3,300/- | 1,000/- | 6,600/- | ಲೈಸೆನ್ಸ್ ಪಡೆದ ಪೇಟೆ ಕಾರ್ಯಕರ್ತರಿಗೆ ಟೆಂಡರ್-ಕಂ-ಬಹಿರಂಗ-ಹರಾಜು |
| | ನಿಯಮ 14 ರ ಮೇರೆಗೆ | | | | | |
| 2 | ಕ್ಯಾಂಟೀನ್‌ಕಟ್ಟಡ (ಉಪಹಾರ ಗೃಹ ನಡೆಸುವ) | 01 | 14,240/- | 1,000/- | 28,480/- | ಟೆಂಡರ್-ಕಂ-ಬಹಿರಂಗ-ಹರಾಜು ಮೂಲಕ |
| 3 | ಶೌಚಾಲಯ (ಪಾವತಿಸಿ ಬಳಸುವ) | 01 | 4,770/- | 1,000/- | 9,540/- | |

ಷರತ್ತು ಮತ್ತು ನಿಬಂಧನೆಗಳು 1.ಹಂಚಿಕೆ ಪಡೆಯಲು ಇಚ್ಚಿಸುವ ಲೈಸೆನ್ಸ್ ಹೊಂದಿದ ಪೇಟೆ ಕಾರ್ಯ ಕರ್ತರು ದಿನಾಂಕ: 28-09-2026ರಿಂದ ದಿನಾಂಕ: 09-10-2026 ರೊಳಗಾಗಿ ನೊಂದಣಿ ಶುಲ್ಕ ರೂ. 2000/- ಗಳನ್ನು [ಮರುಪಾವತಿಸುವುದಿಲ್ಲ] ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ ಈ ಹೆಸರಿಗೆಡಿಡಿ/ನಗದು ಪಡೆದು ಈ ಕಛೇರಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು (ನಿಯಮ 14 ರ ಮೇರೆಗೆ ಅನ್ವಯಿಸುವುದಿಲ್ಲ). 2.ಹಂಚಿಕೆ ಪಡೆಯಲು ಇಚ್ಚಿಸುವ ನೊಂದಾಯಿತ ಅರ್ಹ ಪೇಟೆ ಕಾರ್ಯಕರ್ತರು ಅರ್ಜಿ ರೂ.1000/-ಶುಲ್ಕವನ್ನು (ಜಿ.ಎಸ್.ಟಿ. ಶೇ. 18 ಪ್ರತ್ಯೇಕ) ಕಾರ್ಯದರ್ಶಿಯವರ ಹೆಸರಿನಲ್ಲಿ ಡಿ.ಡಿ/ನಗದು ಪಡೆದು ಈ ಕಛೇರಿಗೆ ಪಾವತಿಸಿ ಅರ್ಜಿ ನಮೂನೆ -3 ಹಾಗೂ ನಮೂನೆ 6 ರಷರತ್ತುಗಳ ವಿವರಗಳನ್ನು ದಿನಾಂಕ: 12-10-2026 ರಿಂದ ದಿನಾಂಕ: 19-10-2026ರ ಸಂಜೆ 5.30 ಗಂಟೆಯವರೆಗೆ ಪಡೆಯಬಹುದು. 3.ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ [ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ] ನಿಯಮಗಳು 2004ರ ನಿಗಧಿತ ನಮೂನೆ-3 ರಲ್ಲಿ ಭರ್ತಿ ಮಾಡಿದ ಅರ್ಜಿಯ ಜೊತೆಗೆ ನಿಗಧಿಪಡಿಸಿದ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸಲು ಕೊನೆಯ ದಿನಾಂಕ: 21-10-2026 ರಂದು ಸಂಜೆ 5.30 ಗಂಟೆಯವರೆಗೆ. 4.ಹೆಚ್ಚಿನ ವಿವರಗಳನ್ನು ಮತ್ತು ಅರ್ಜಿಯೊಂದಿಗೆ ಸಲ್ಲಿಸಬೇಕಾದ ಇತರೆ ದಾಖಲೆಗಳ ಬಗ್ಗೆ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಛೇರಿಗೆ ಬಂದು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-(ಸಿ.ಎಲ್. ಸಿದ್ದರಂಗಸ್ವಾಮಿ) ಕಾರ್ಯದರ್ಶಿ ಕೃಉಮಾಸ, ಅರಸೀಕೆರೆ.

ಸಹಿ/-(ಎಂ.ಜಿ. ಸಂತೋಷ್‌ಕುಮಾರ್) ಆಡಳಿತಾಧಿಕಾರಿಗಳು. ಕೃಉಮಾಸ, ಅರಸೀಕೆರೆ.

ವಾಸಾಸಂಇ/ಹಿಸನಿ/ಹಾಸನ/568/ಕೆಎಸ್ಎಂಸಿಎ/2026-27


# ಕಂಚು ಗೆದ್ದ ಪಿಂಕಿ ಬಲ್ಹಾರಾ



**ನಾಗೋಯಾ:** ಭಾರತದ ಪಿಂಕಿ ಬಲ್ಹಾರಾ ಅವರು ಸೋಮವಾರ ಏಷ್ಯನ್ ಗೇಮ್ಸ್‌ನ ಕುರಾಶ್ ಸ್ಪರ್ಧೆಯಲ್ಲಿ ಕಂಚು ಗೆದ್ದರು. ಇದರೊಂದಿಗೆ ಕೂಟದ ಇತಿಹಾಸದಲ್ಲಿ 2 ಪದಕಗಳನ್ನು ಗೆದ್ದ ಭಾರತದ ಮೊದಲ ಕುರಾಶ್‌ಪಟು ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಮಹಿಳೆಯರ 78 ಕೆ.ಜಿ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ 27 ವರ್ಷದ ಪಿಂಕಿ 0-5ರಿಂದ ದಕ್ಷಿಣ ಕೊರಿಯಾದ ಸುಮಿನ್ ಮೋ ವಿರುದ್ಧ ಸೋಲು ಅನುಭವಿಸಿದ ಬಳಿಕ ಕಂಚಿನೊಂದಿಗೆ ಅಭಿಯಾನ ಮುಗಿಸಿದರು.

2018ರ ಜಕಾರ್ತ ಏಷ್ಯನ್ ಗೇಮ್ಸ್‌ನಲ್ಲಿ ಈ ಕ್ರೀಡೆಯನ್ನು ಮೊದಲ ಬಾರಿ ಪರಿಚಯಿಸಿದಾಗ 52 ಕೆ.ಜಿ ವಿಭಾಗದಲ್ಲಿ ದೆಹಲಿಯ ಪಿಂಕಿ ಬೆಳ್ಳಿ ಪದಕ ಗೆದ್ದಿದ್ದರು. ಅದೇ ಕೂಟದಲ್ಲಿ ಬೆಳಗಾವಿಯ ಮಲಪ್ರಭಾ ಜಾಧವ್ ಕಂಚಿನ ಪದಕ ಗೆದ್ದಿದ್ದರು.

# ವಿದ್ಯಾರ್ಥಿಗಳು ಮಾನವೀಯ ಮೌಲ್ಯ ಅಳವಡಿಸಿಕೊಳ್ಳಿ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಸತ್ಪ್ರಜೆಯಾಗಿ ಬೆಳೆಯಬೇಕೆಂದು ಹಾಸನ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೋ.ಎಸ್.ನಾಗರಾಜು ಅವರು ಕಿವಿಮಾತು ಹೇಳಿದರು.

ನಗರದ ಕುವೆಂಪು ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಮತ್ತು ಅಂತಿಮ ವರ್ಷದ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪದವಿಯಿಂದ ಉದ್ಯೋಗ ಹಾಗು ಆರ್ಥಿಕ ದೃಢತೆ ಸಿಗುತ್ತದೆ. ಉನ್ನತ ಶಿಕ್ಷಣ ಪಡೆಯುವ ಅವಕಾಶ ಲಭಿಸುತ್ತದೆ. ಸಾಮಾಜಿಕ ಗೌರವ ದೊರೆಯುತ್ತದೆ. ಜೊತೆಗೆ ಕೇವಲ ವಿದ್ಯೆ ಸಂಪಾದಿಸಿದರೆ ಸಾಲದು, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಮಹನೀಯರು ಹಾಕಿಕೊಟ್ಟ ಮಾರ್ಗದಲ್ಲಿ ವಿದ್ಯಾರ್ಥಿಗಳು ಸಾಗಬೇಕೆಂದರು.

ಪತ್ರಕರ್ತ ಬಿ.ಆರ್.ಉದಯ ಕುಮಾರ್ ಅವರು ಮಾತನಾಡಿ, ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು ಕೂಡ ಉತ್ತಮ ಸಾಧನೆ ಮಾಡಲು ಸಾಧ್ಯ. ವಿದ್ಯಾರ್ಥಿಗಳು ಸಮಯ ಪಾಲನೆ, ಸಾಮಾಜಿಕ ಬದ್ದತೆ, ಶಿಸ್ತು, ಪರಿಶ್ರಮ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜೀವನದಲ್ಲಿ ಹಿಂಜರಿಕೆ ಬೇಡ, ವಿದ್ಯೆ ಇದ್ದರೆ ಸಾಲದು ವಿನಯವು ಇರಬೇಕು. ತಂದೆ-ತಾಯಿ, ಶಿಕ್ಷಕರಿಗೆ, ನೀವು ಕಲಿತ ಶಾಲಾ ಕಾಲೇಜಿಗೆ ಗೌರವ ಕೊಡಿ. ಸ್ಪರ್ಧಾತ್ಮಕಯುಗವನ್ನು ಸರಿಯಾದ ರೀತಿ ಎದುರಿಸಿ ಎಂದರು.



ಸಂಸ್ಥೆಯ ಕಾರ್ಯದರ್ಶಿ ಬಿ.ಈ. ಶಿವರಾಮೇಗೌಡ ಅವರು ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಪರಿಶ್ರಮ ರೂಪಿಸಿಕೊಂಡು ಯಶಸ್ಸು ಪಡೆಯಬೇಕು. ನಿಮಗೆ ಜನ್ಮ ನೀಡಿದ ತಂದೆ-ತಾಯಿ, ವಿದ್ಯೆ ಕಲಿಸಿದ ಗುರು, ಎಲ್ಲವನ್ನು ಕೊಟ್ಟ ಸಮಾಜಕ್ಕೆ ಯಾವಾಗಲೂ ಋಣಿಯಾಗಿರಿ ಎಂದರು.

ಪ್ರಾಂಶುಪಾಲ ಕೆ.ಆರ್.ಹರೀಶ್ ಅವರು ಮಾತನಾಡಿ, ಕಾಲೇಜು ಪ್ರಾರಂಭವಾದಾಗ 180 ವಿದ್ಯಾರ್ಥಿಗಳು ದಾಖಲಾಗಿದ್ದು, ಪ್ರಸ್ತುತ ಸಾಲಿನಲ್ಲಿ 405 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಸಾಂಸ್ಕೃತಿಕ ಸಂಘ, ಮಹಿಳಾ ದೌರ್ಜನ್ಯ ನಿವಾರಣ ಸಮಿತಿ, ರೆಡ್‌ಕ್ರಾಸ್ ಘಟಕ ಸ್ಥಾಪನೆ, ಕಾಲೇಜು ಪ್ರವಾಸ ಹಾಗು ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ದಾಖಲಿಸುತ್ತಿದೆ ಎಂದರು.

ಕನ್ನಡ ಉಪನ್ಯಾಸಕಿ ಬಿ.ಕೆ.ಚೇತನ ಕುಮಾರಿ, ವಾಣಿಜ್ಯಶಾಸ್ತ್ರ ವಿಭಾಗ ಉಪನ್ಯಾಸಕಿ ಎಸ್.ಎ. ರೇಖಾ, ಜಿ. ಎಸ್.ಅರ್ಚನಾ ಮತ್ತಿತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019